# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ನವೆಂಬರ್ 07, 2021

ಸಂಪುಟ : 48 ಸಂಚಿಕೆ : 176 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com





ದಾವಣಗೆರೆ, ನ.6- ನಗರದ ಎಂ.ಸಿ.ಸಿ. ಎ ಬ್ಲಾಕ್‌ನ 7ನೇ ಮುಖ್ಯ ರಸ್ತೆಯಲ್ಲಿರುವ ಇಸ್ಕಾನ್ ಸತ್ಸಂಗ ಕೇಂದ್ರದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಬೆಳಿಗ್ಗೆ ಕೇಂದ್ರದ ಪ್ರಮುಖ ಶ್ರೀ ಅವಧೂತ ಚಂದ್ರಹಾಸ ಅವರ ಸಾನ್ನಿಧ್ಯದಲ್ಲಿ ಶ್ರೀ ಗೋವರ್ಧನ ಪೂಜೆ ನಡೆಯಿತು.

ಶ್ರೀಕೃಷ್ಣನಿಗೆ ವಿವಿಧ ಸಿಹಿತಿಂಡಿಗಳು ಮತ್ತು ಭಕ್ಷ್ಯಗಳನ್ನು ಅರ್ಪಿಸಲಾಯಿತು. ನಂತರ ನೆರೆದಿದ್ದ ಭಕ್ತರಿಗೆ ಆಶೀರ್ವಚನ ನೀಡಿದ ಶ್ರೀ ಅವಧೂತ ಚಂದ್ರಹಾಸ ಅವರು, ಶ್ರೀ ಕೃಷ್ಣನನ್ನು ನಿತ್ಯ ನೆನೆಯುವುದರಿಂದ ಜೀವನದ ಸಂಕಷ್ಟಗಳಿಂದ ಮುಕ್ತಿ ಹೊಂದಬಹುದು ಎಂದು ಕಿವಿ ಮಾತು ಹೇಳುತ್ತಾ, ಗೋವರ್ಧನ ಪೂಜೆಯ ಮಹತ್ವ ವಿವರಿಸಿದರು. ಸಂಜೆ ಶ್ರೀ ದಾಮೋದರ ಆರತಿ (ದೀಪದಾನ) ಕಾರ್ಯಕ್ರಮ ನಡೆಯಿತು.

## ರಾತ್ರಿ ಕರ್ಫ್ಯೂ ರದ್ದು

ಬೆಂಗಳೂರು, ನ. 6- ಕೊರೊನಾ ಸೋಂಕು ನಿಯಂತ್ರಿಸಲು ಜಾರಿಗೊಳಿಸಲಾಗಿದ್ದ ರಾತ್ರಿ ಕರ್ಫ್ಯೂ ರದ್ದುಗೊಳಿಸಲಾಗಿದೆ. ಅಷ್ಟೇ ಅಲ್ಲ ಸೋಂಕು ನಿಯಮಾವಳಿ ಮುನ್ನೆಚ್ಚರಿಕೆ ತೆಗೆದುಕೊಂಡು ಕುದುರೆ ರೇಸ್ ನಡೆಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಕೊರೊನಾ ಎರಡನೇ ಅಲೆ ಸೋಂಕು ಹೆಚ್ಚಳವಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ರಾತ್ರಿ 10 ರಿಂದ ಬೆಳಗಿನ ಜಾವ 5 ಗಂಟೆಯವರೆಗೆ ಕರ್ಫ್ಯೂ ಜಾರಿಗೊಳಿಸಿತ್ತು.

ಸೋಂಕು ಪ್ರಕರಣಗಳು ಇಳಿಕೆಯಾಗಿರುವುದರಿಂದ ರಾಜ್ಯಾದ್ಯಂತ ರಾತ್ರಿ ಕರ್ಫ್ಯೂ ರದ್ದುಗೊಳಿಸಿ, ಕುದುರೆ ರೇಸಿಗೂ ಅನುಮತಿ ನೀಡಿದೆ.

ಈ ಸಂಬಂಧ ಮುಖ್ಯ ಕಾರ್ಯದರ್ಶಿ ಮತ್ತು ವಿಪತ್ತು (3ನೇ ಪುಟಕ್ಕೆ)

## ಹೆಚ್ಚಿದ ಅಕಾಲಿಕ ಮಳೆ

### ಕ್ರಮಕ್ಕೆ ಬೊಮ್ಮಾಯಿ ಸೂಚನೆ

ಬೆಂಗಳೂರು, ನ. 6- ಪ್ರಸ್ತುತ ವರ್ಷ ಅಕಾಲಿಕ ಮಳೆ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿದ್ದು ತುರ್ತು, ಅಲ್ಪಾವಧಿ, ದೀರ್ಘಾವಧಿ ಕ್ರಮಗಳನ್ನು ತಕ್ಷಣವೇ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿ ಸುರಿಯುತ್ತಿರುವ ಮಳೆಯಿಂದ ಉಂಟಾಗಿರುವ ಹಾನಿಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಈ ಆದೇಶ ನೀಡಿದರು.


ಇನ್ನೆರಡು ದಿನಗಳ ಕಾಲ ನಗರದಲ್ಲಿ ಮಳೆ ಯಾಗುವ ಸಂಭವವಿರುವ ಬಗ್ಗೆ ಹವಾಮಾನ ಮುನ್ಸೂಚನೆ ಇದೆ. ಬೆಂಗಳೂರು ಮಳೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು. ಮಳೆಯನ್ನು ನಿಭಾಯಿಸುವ ವಿಧಾನ ಬದಲಾಯಿಸಿ, ಮಳೆಯಿಂದ ಆಗುತ್ತಿರುವ ಹಾನಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳ ಬೇಕು ಎಂದ ಮುಖ್ಯಮಂತ್ರಿಗಳು, ಬೆಂಗಳೂರು (3ನೇ ಪುಟಕ್ಕೆ)

# ಜಿಲ್ಲೆಯಲ್ಲಿ ಸಂಭ್ರಮದ ದೀಪಾವಳಿ

## ಪಟಾಕಿ ಸದ್ದು ಹೆಚ್ಚಳ, ಹಸಿರು ಪಟಾಕಿಯಿಂದ ಮಾಲಿನ್ಯ ಇಳಿಕೆ

ದಾವಣಗೆರೆ, ನ. 6 - ಸುಪ್ರೀಂ ಕೋರ್ಟ್ ಆದೇಶದಂತೆ ಹಸಿರು ಪಟಾಕಿಗಳನ್ನು ಕಡ್ಡಾಯಗೊಳಿಸಿರುವುದರಿಂದ, ಈ ದೀಪಾವಳಿಯಲ್ಲಿ ಶಬ್ದ ಹಾಗೂ ವಾಯು ಮಾಲಿನ್ಯದ ಪ್ರಮಾಣ ಕಡಿಮೆಯಾಗಿದೆ.

ದೀಪಾವಳಿಯ ದಿನವಾದ ನ. 5ರಂದು ನಗರದ ಚೌಕಿಪೇಟೆಯಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಳವಡಿಸಿರುವ ಸದ್ದು ಅಳತೆ ಉಪಕರಣದಲ್ಲಿ 71.76 ಡೆಸಿಬಲ್ ಶಬ್ದ ಮಾಲಿನ್ಯ ದಾಖಲಾಗಿದೆ. ನ.4ರಂದು ಇಲ್ಲಿ ದಾಖಲಾದ ಶಬ್ದದ ಪ್ರಮಾಣ 60.24 ಡೆಸಿಬಲ್ ಮತ್ತು ಕಳೆದ ಅಕ್ಟೋಬರ್ 29ರಂದು 51.8 ಡೆಸಿಬಲ್ ಶಬ್ದ ದಾಖಲಾಗಿತ್ತು.



ಇದೇ ದಿನ ಅಳತೆ ಮಾಡಲಾದ ವಾಯು ಮಾಲಿನ್ಯದ ಗುಣಮಟ್ಟವೂ ಸಹ ಸಮಾಧಾನಕರ ಹಂತದಲ್ಲಿದೆ. ಎನ್‌ಒ2, ಎಸ್‌ಒ2, ಪಿಎಂ2.5 ಹಾಗೂ ಪಿಎಂ10 ದೂಳಿನ ಕಣಗಳ ಮಾನದಂಡಗಳು ನಿಗದಿತ ಮಟ್ಟದಲ್ಲೇ ಇದ್ದವು. ಕಳೆದ ವರ್ಷದ ದೀಪಾವಳಿಗೆ ಹೋಲಿಸಿದರೆ ಈ ಬಾರಿ ಮಾಲಿನ್ಯದ ಪ್ರಮಾಣ ಶೇ.15ರಷ್ಟು ಕಡಿಮೆಯಾಗಿದೆ ಎಂದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಜಿಲ್ಲಾ ಪರಿಸರ ಅಧಿಕಾರಿ ಎಂ.ಎಸ್. ಮಹೇಶ್ವರಪ್ಪ ಪತ್ರಿಕೆಗೆ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿರುವ ಪಟಾಕಿ ಮಾರಾಟಗಾರರ ಸಂಘದ ಅಧ್ಯಕ್ಷ ಡಿ.ಎಸ್. ಸಿದ್ದಣ್ಣ, ಈ ವರ್ಷ ಹಸಿರು ಪಟಾಕಿಗಳ ಬಗ್ಗೆ ಮೊದಲೇ ತಿಳಿಸಲಾಗಿತ್ತು. ಹೀಗಾಗಿ ವರ್ತಕರು ಸಂಪೂರ್ಣವಾಗಿ ಹಸಿರು ಪಟಾಕಿಗಳನ್ನೇ ಮಾರಿದ್ದಾರೆ. ಅಧಿಕಾರಿಗಳೂ ಸಹ ಪರಿಶೀಲನೆ ನಡೆಸಿದ್ದಾರೆ ಎಂದು ತಿಳಿಸಿದ್ದಾರೆ. ಕಳೆದ ವರ್ಷ ಕೊನೆ ಗಳಿಗೆಯಲ್ಲಿ ಹಸಿರು ಪಟಾಕಿ ಕಡ್ಡಾಯ ಎಂದು ತಿಳಿಸಲಾಗಿತ್ತು. ಹೀಗಾಗಿ ಹಲವಾರು (3ನೇ ಪುಟಕ್ಕೆ)

### ಪಟಾಕಿ ವಹಿವಾಟು ಹೆಚ್ಚಳ

ನಗರದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ದೀಪಾವಳಿಯಲ್ಲಿ ಪಟಾಕಿ ವಹಿವಾಟು ಹೆಚ್ಚಾಗಿದ್ದುದು ಕಂಡು ಬಂದಿದೆ. ಕೊರೊನಾ ತೀವ್ರತೆ ತಗ್ಗಿದ್ದೂ ಸಹ, ದೀಪಾವಳಿಯ ಉತ್ಸಾಹ ಹೆಚ್ಚಿಸಿತ್ತು.

ಹಸಿರು ಪಟಾಕಿಯ ಬಗ್ಗೆ ಈ ವರ್ಷ ಮೊದಲೇ ಸ್ಪಷ್ಟತೆ ಇತ್ತು. ಹೀಗಾಗಿ ಶಿವಕಾಶಿಯಿಂದ ಹಸಿರು ಪಟಾಕಿಗಳೇ ರವಾನೆಯಾಗಿದ್ದವು ಎಂದು ಪಟಾಕಿ ವರ್ತಕರು ಹೇಳಿದ್ದಾರೆ.

ಹಸಿರು ಪಟಾಕಿ ಕಾರಣದಿಂದಾಗಿ ಪಟಾಕಿಗಳ ಬೆಲೆ ತುಸು ಹೆಚ್ಚಾಗಿದ್ದರೂ, ಗ್ರಾಹಕರು ಉತ್ಸಾಹದಿಂದಲೇ ಪಟಾಕಿಗಳನ್ನು ಖರೀದಿಸಿದ್ದಾರೆ ಎಂದು ಪಟಾಕಿ ವರ್ತಕ ಪಿ.ಸಿ. ಶ್ರೀನಿವಾಸ್ ತಿಳಿಸಿದ್ದಾರೆ.

ನಗರದಲ್ಲಿ ವರ್ತಕರು ತರಿಸಿದ ಬಹುತೇಕ ಎಲ್ಲ ಪಟಾಕಿಗಳ ಮಾರಾಟವಾಗಿದೆ ಎಂದು ಪಟಾಕಿ ಮಾರಾಟಗಾರರ ಸಂಘದ ಅಧ್ಯಕ್ಷ ಡಿ.ಎಸ್. ಸಿದ್ದಣ್ಣ ಹೇಳಿದ್ದಾರೆ.

# ಹರಿಹರ: ಮಾ.22 ರಿಂದ ಊರಮ್ಮ ದೇವಿ ಹಬ್ಬ

ಹರಿಹರ, ನ.6- ನಗರದ ಕಸಬಾ ಮತ್ತು ಮಾಜೇನಹಳ್ಳಿ ಗ್ರಾಮದೇವತೆ ಊರಮ್ಮ ದೇವಿಯ ಜಾತ್ರೆಯನ್ನು ಬರುವ 2022 ರ ಮಾರ್ಚ್ 22 ರಿಂದ 26 ರವರೆಗೆ ಅದ್ದೂರಿಯಾಗಿ ನಡೆಸಲಾಗುವುದು ಎಂದು ಶಾಸಕ ಎಸ್. ರಾಮಪ್ಪ ತಿಳಿಸಿದ್ದಾರೆ.

ನಗರದ ಶಿಬಾರ ಹತ್ತಿರದ ಶ್ರೀ ಕಸಬಾ ಗ್ರಾಮದೇವತೆ ದೇವಸ್ಥಾನದ ಆವರಣದಲ್ಲಿ ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್ ಮತ್ತು ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಭೆಯಲ್ಲಿ ಅವರು ಹಬ್ಬದ ದಿನಾಂಕ ಘೋಷಣೆ ಮಾಡಿದರು.

ಹಬ್ಬ ಆಚರಣೆ ವಿಚಾರವಾಗಿ ಸ್ಥಳೀಯ ಕಸಬಾ ಮತ್ತು ಮಾಜೇನಹಳ್ಳಿ ಗ್ರಾಮದ ಗೌಡ್ರು ಹಾಗೂ ನಗರದ ಮುಖಂಡರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಭೇಟಿ ಮಾಡಿದ್ದು, ಜಿಲ್ಲಾಧಿಕಾರಿಗಳು ಹಬ್ಬದ ಆಚರಣೆಗೆ ಆದೇಶ ನೀಡಲು ಬರುವುದಿಲ್ಲ ಎಂದು ಹೇಳಿ ಕಳುಹಿಸಿದ್ದಾರೆ. ಈ ಕುರಿತು ಮತ್ತೊಮ್ಮೆ ಅವರೊಂದಿಗೆ (3ನೇ ಪುಟಕ್ಕೆ)



# ಹರಿಹರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ, ಗೋ ಪೂಜೆ

ಹರಿಹರ, ನ.6- ದೇಶದಲ್ಲಿ ಸುಖ, ಶಾಂತಿ, ಸುಭಿಕ್ಷೆ ನೆಲೆಸುವುದ ರೊಂದಿಗೆ ದೇಶ ಸಮೃದ್ಧಿಯಾಗಲೆಂದು ಪ್ರಧಾನಿ ನರೇಂದ್ರ ಮೋದಿಯವರು ಕೇದಾರನಾಥ ಪುಣ್ಯ ಕ್ಷೇತ್ರದಲ್ಲಿ ಆದಿ ಶಂಕರಾಚಾರ್ಯರ ಪುತ್ಥಳಿ ಅನಾವರಣ ಮಾಡುತ್ತಿದ್ದಾರೆ ಎಂದು ಸಂಸದ ಜಿ. ಎಂ. ಸಿದ್ದೇಶ್ವರ ಹೇಳಿದರು.

**ದೇಶ ಸಮೃದ್ಧಿಯಾಗಲೆಂದು ಶಂಕರಾಚಾರ್ಯರ ಪುತ್ಥಳಿ ಅನಾವರಣ**
**- ಜಿ.ಎಂ.ಸಿದ್ದೇಶ್ವರ,** ಸಂಸದ

ಹರಿಹರೇಶ್ವರ ದೇವಸ್ಥಾನದಲ್ಲಿ ನಿನ್ನೆ ಆಯೋಜಿಸಲಾಗಿದ್ದ ಆದಿ ಶಂಕರರ ಪುತ್ಥಳಿ ಅನಾವರಣ ನೇರ ಪ್ರಸಾರ ಕಾರ್ಯಕ್ರಮಕ್ಕೂ ಮುನ್ನ ದೇವಸ್ಥಾನದ ಆವರಣದಲ್ಲಿ ಗೋ ಪೂಜೆ ನೆರವೇರಿಸಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಆದಿ ಶಂಕರಾಚಾರ್ಯರು (3ನೇ ಪುಟಕ್ಕೆ)


## ಕಾಣೆಯಾಗಿದ್ದಾರೆ



**ಶ್ರೀನಿವಾಸ್ ತಂದೆ ಚಿಲಕೂರಿ ಪ್ರಸಾದರಾವ್** 42 ವರ್ಷ ಬಿಸಲೇರಿ ಕ್ಯಾಂಪ್ ದಾವಣಗೆರೆ ತಾ॥ ದಾವಣಗೆರೆ ಜಿಲ್ಲೆ, ಹದಡಿ ಪೋಸ್ಟ್ ವಾಸಿಯಾದ ಇವರು ದಿನಾಂಕ : 31-10-2021 ರಂದು ಸಂಜೆ 7.00 ಗಂಟೆಗೆ ಮನೆಯಿಂದ ಹೊರಗೆ ಹೋದವರು ಇದುವರೆಗೂ ಬಂದಿರುವುದಿಲ್ಲ. 6 ಅಡಿ ಎತ್ತರ, ಕಮ್ಮ ಜನಾಂಗ, ದುಂಡು ಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು, ತೆಲುಗು ಹಾಗೂ ಕನ್ನಡ ಭಾಷೆ ಬಲ್ಲ ಇವರ ಸುಳಿವು ಯಾರಿಗಾದರೂ ತಿಳಿದರೆ ಹತ್ತಿರದ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.

96326 66916, 97392 93939, 96203 25096





# ಶೀಘ್ರದಲ್ಲೇ ಹೆಚ್.ಶಿವಪ್ಪ ಅಭಿಮಾನಿ ಬಳಗದಿಂದ ಸಾಂಸ್ಕೃತಿಕ ಕಾರ್ಯಕ್ರಮ

ಹರಿಹರ, ನ.6- ಹೆಚ್. ಶಿವಪ್ಪ ಸಾಂಸ್ಕೃತಿಕ ಅಭಿಮಾನಿ ಬಳಗದ ವತಿಯಿಂದ ನಾಡಿನ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ರಾಣಿ ಚೆನ್ನಮ್ಮ ಜಯಂತಿ ಆಚರಣೆ, ಕನ್ನಡ ರಾಜ್ಯೋತ್ಸವ ಆಚರಣೆ, ಹಜರತ್ ಟಿಪ್ಪು ಸುಲ್ತಾನ್ ಜಯಂತಿ ಹಾಗೂ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮವನ್ನು ಅತಿ ಶೀಘ್ರದಲ್ಲಿಯೇ ಹಮ್ಮಿಕೊಳ್ಳಲಾಗುವುದು ಎಂದು ಬಳಗದ ಸಂಚಾಲಕ ಹಾಗೂ ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ತಿಳಿಸಿದ್ದಾರೆ.

ನಗರದ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದಲ್ಲಿ ಹೆಚ್. ಶಿವಪ್ಪ ಅಭಿಮಾನಿಗಳ ಸಾಂಸ್ಕೃತಿಕ ಬಳಗದ ವತಿಯಿಂದ ಇಂದು ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕ್ಷೇತ್ರದ ಜನರ ಒಳಿತಿಗಾಗಿ ಕಳೆದ 2013 ರಂದು ಹೆಚ್. ಶಿವಪ್ಪ ಸಾಂಸ್ಕೃತಿಕ ಬಳಗವನ್ನು ಹುಟ್ಟು ಹಾಕುವ ಮೂಲಕ ಸಾಮೂಹಿಕ ಮದುವೆ, ಹರಿಹರ ಹಬ್ಬ, ಆರೋಗ್ಯ ಮೇಳ, ಸ್ಮರಣೋತ್ಸವ ಸಮಾರಂಭ ಸೇರಿದಂತೆ ಹಲವಾರು ಕಾರ್ಯಕ್ರಮ ಗಳನ್ನು ಮಾಡುತ್ತಾ ಬಂದಿದ್ದು, ಕ್ಷೇತ್ರದ ಜನರ ಅಭಿಲಾಷೆಯಂತೆ ಈ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಹಮ್ಮಿಕೊಳ್ಳಲಾಗುವುದು ಎಂದರು.

**ಕ್ಷೇತ್ರದ ಅಭಿವೃದ್ಧಿಗೆ ಮತ್ತೊಂದು ಅವಕಾಶ ನೀಡಿ:** ಕ್ಷೇತ್ರದ ಅಭಿವೃದ್ಧಿಗೆ ನನ್ನ ತಂದೆ ಮಾಜಿ ಸಚಿವರಾದ ಹೆಚ್. ಶಿವಪ್ಪನವರ ಕೊಡುಗೆಯನ್ನು ಇಂದಿಗೂ ಜನರು ಸ್ಮರಿಸುತ್ತಾರೆ. ಅವರ ಮಾರ್ಗದರ್ಶನದಿಂದ ನಾನು ಕ್ಷೇತ್ರದ ಜನರ ಒಳಿತಿಗಾಗಿ ಶ್ರಮಿಸುವ ಕಾರ್ಯವನ್ನು ಮಾಡುತ್ತಿದ್ದು, ದೇವರು ಹುಟ್ಟು ಮತ್ತು ಸಾವಿನ ಹಣೇ ಬರಹವನ್ನು ಬರೆದರೆ, ರಾಜಕೀಯ ಹಣೇ ಬರಹವನ್ನು ಕ್ಷೇತ್ರದ ಜನತೆಯಿಂದ ಬರೆಯಲು ಸಾಧ್ಯ. ಈ ಕ್ಷೇತ್ರದ ಅಭಿವೃದ್ಧಿಗೆ ಮತ್ತೊಂದು ಅವಕಾಶ ನೀಡಿ ಎಂದು ಶಿವಶಂಕರ್ ಕೇಳಿಕೊಂಡರು.

ಬಿಜೆಪಿ ಸರ್ಕಾರದ ಆಡಳಿತದಲ್ಲಿ ಪ್ರತಿ ನಿತ್ಯವೂ ನಾಟಕೀಯ ಬೆಳವಣಿಗೆ ಮತ್ತು ದಿನಬಳಕೆಯ ವಸ್ತುಗಳ ಏರಿಕೆ ಕಂಡು



ಜನರು ತತ್ತರಿಸಿದ್ದಾರೆ. ಇನ್ನು ಕಾಂಗ್ರೆಸ್ ಪಕ್ಷದಲ್ಲಿ ಒಳಜಗಳ ಮುಂದುವರೆದಿದೆ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ಕುಮಾರ ಸ್ವಾಮಿ ಮುಖ್ಯಮಂತ್ರಿಯಾದರೆ, ಈ ಕ್ಷೇತ್ರಕ್ಕೆ ಹೆಚ್. ಎಸ್. ಶಿವಶಂಕರ್ ಶಾಸಕರು ಎಂದು ಹೇಳುತ್ತಿದ್ದಾರೆ. ಜನರು ಯಾವ ವ್ಯಕ್ತಿ ಜನರ ಪರವಾಗಿ ಮತ್ತು ಬಡವರ ಪರವಾಗಿ ಕೆಲಸ ಮಾಡುತ್ತಾರೆ ಎಂದು ಅರಿತಿದ್ದಾರೆ ಎಂದ ಶಿವಶಂಕರ್, ತಮ್ಮ ಅವಧಿಯಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಕುರಿತು ಪ್ರಚಾರ ಮಾಡದೇ ಇರುವುದರಿಂದ ಅಲ್ಪಸಂಖ್ಯಾತರು ಕಾಂಗ್ರೆಸ್‌ಗೆ ಬೆಂಬಲ ನೀಡಿದರು. ಈ ಬಾರಿ ಅವರೂ ಸಹ ನೀವು ಶಾಸಕರಾಗಬೇಕೆಂದು ಅಭಿಲಾಷೆ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ನಗರಸಭೆ ಸದಸ್ಯ ಆರ್.ಸಿ. ಜಾವೇದ್ ಮಾತನಾಡಿ, ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಮತ್ತೊಮ್ಮೆ ಹೆಚ್. ಎಸ್. ಶಿವಶಂಕರ್ ಶಾಸಕರಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ನಗರಸಭೆ ಸದಸ್ಯ ದಾದಾ ಖಲಂದರ್ ಮಾತನಾಡಿ, ಕ್ಷೇತ್ರದ ಹಾಲಿ ಶಾಸಕರು ಅದೃಷ್ಟದ ಶಾಸಕರು. ಅವರು ಹೋರಾಟ ಮಾಡಿ ಅಧಿಕಾರಕ್ಕೆ ಬಂದಿದ್ದರೆ ಕ್ಷೇತ್ರದ ಕಷ್ಟ-ಸುಖದ ಅರ್ಥವನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತಿತ್ತು. ಕ್ಷೇತ್ರದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಶಿವಶಂಕರ್ ಅವರನ್ನು ಗೆಲ್ಲಿಸಬೇಕಿದೆ ಎಂದರು.

ಪರಮೇಶ್ವರಗೌಡ ಮಾತನಾಡಿ, ಪಂಚಮಸಾಲಿ ಸಮಾಜದ ಜನರು ಶಿವಶಂಕರ್ ಪರವಾಗಿ ಇಲ್ಲ ಎಂದು ಕೆಲವರು ಅಪ ಪ್ರಚಾರ ಮಾಡುತ್ತಿದ್ದಾರೆ. ಶೇ. 5 ರಷ್ಟು ಜನರು ಬೇರೆ ಪಕ್ಷಕ್ಕೆ ಹೋಗಿರಬಹುದು. ಆದರೆ, ಶೇ. 95 ರಷ್ಟು ಪಂಚಮಸಾಲಿ ಸಮಾಜದ ಜನರು ಶಿವಶಂಕರ್ ಪರವಾಗಿ ಇದ್ದಾರೆ ಎಂದು ಹೇಳಿದರು.

ಚಂದ್ರಪ್ಪ ಹಾಗೂ ರುದ್ರಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಪರಮೇಶ್ವರಪ್ಪ, ಹೆಚ್. ನಿಜಗುಣ, ಜಿ. ನಂಜಪ್ಪ, ಪರಮೇಶ್ವರಗೌಡ್ರು, ಡಿ.ಎಂ. ಹಾಲಸ್ವಾಮಿ, ನಗರಸಭೆ ಸದಸ್ಯರಾದ ಜಂಬಣ್ಣ ಗುತ್ತೂರು, ಪಿ.ಎನ್. ವಿರೂಪಾಕ್ಷ, ದಿನೇಶ್ ಬಾಬು, ಆರ್.ಸಿ. ಜಾವೇದ್, ದೀಟೂರು ಶೇಖರಪ್ಪ, ಗುತ್ತೂರು ನಾಸೀರ್, ಸುರೇಶ್ ಹಾದಿಮನಿ, ಮಿಟ್ಲಲಕಟ್ಟಿ ಚಂದ್ರಪ್ಪ, ಡಿ. ಉಜ್ಜೇಶ್, ಯಲವಟ್ಟಿ ಬಸವನಗೌಡ್ರು, ಬಂಡೇರ್ ತಿಮ್ಮಣ್ಣ, ವಾಸನದ ರುದ್ರಪ್ಪ, ಗಂಗನರಸಿ ಅಬ್ಲೂರಪ್ಪ, ವಕೀಲ ರುದ್ರೇಶ್ ಬಿಳಸನೂರು, ಮನಸೂರು ಮದ್ದಿ, ದಾದಾ ಖಲಂದರ್, ಹೆಚ್.ಕೆ. ವೀರಪ್ಪ, ಕಾಳೇರ ಮಂಜುನಾಥ್, ರಂಗಪ್ಪ ಜಿಗಳಿ, ಅಮರಾವತಿ ನಾಗರಾಜ್, ಕುಮಾರ್ ಅಡಿಕಿ, ಆಸೀಫ್, ಜಾಕೀರ್, ರಾಗಿಣಿ, ಲತಾ ಕೊಟ್ರೇಶ್ ಇನ್ನಿತರರು ಹಾಜರಿದ್ದರು.

> ನನ್ನ ಆಡಳಿತಾವಧಿಯಲ್ಲಿ ಕ್ಷೇತ್ರಕ್ಕೆ 10 ಕೋಟಿ ರೂ. ಅನುದಾನ ತಂದಿಲ್ಲ ಎಂದು ಆರೋಪ ಮಾಡಿದವರಿಗೆ ಅತಿ ಶೀಘ್ರದಲ್ಲಿಯೇ ಮಲೇಬೆನ್ನೂರಿನಲ್ಲಿ ಎಷ್ಟು ಹಣವನ್ನು ತಂದು ಅಭಿವೃದ್ಧಿ ಮಾಡಿದ್ದೇನೆ ಹಾಗೂ ಕೊಮಾರನಹಳ್ಳಿ ಕೆರೆ ವಿಚಾರಕ್ಕೆ ಸಂಬಂಧಿಸಿದಂತೆ ದಾಖಲೆಗಳ ಸಮೇತ ಉತ್ತರಿಸುವೆ. ನನ್ನ ಬಗ್ಗೆ ಅಪಪ್ರಚಾರ ಮಾಡುವವರು ಕ್ಷೇತ್ರದಲ್ಲಿ ಸಂಚರಿಸಿ, ಜನರ ಅಭಿಪ್ರಾಯ ಪಡೆದು ಮಾತನಾಡಬೇಕು. ಹಾಲಿ ಶಾಸಕರ ಅಭಿವೃದ್ಧಿ ಹಿನ್ನಡೆ ಬಗ್ಗೆ ಜನರು ಅರಿತಿದ್ದಾರೆ. ಸುಳ್ಳು ಹೇಳುವುದು ಬಿಟ್ಟರೆ ಅವರ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿ ಶೂನ್ಯ.
>
> **- ಹೆಚ್.ಎಸ್. ಶಿವಶಂಕರ್,** ಮಾಜಿ ಶಾಸಕರು

# ಹೃದಯದ ಆರೋಗ್ಯಕ್ಕಾಗಿ ರಕ್ತದಾನ ಮಾಡಬೇಕು



### ಶ್ರೀ ಬಸವಪ್ರಭು ಸ್ವಾಮೀಜಿ ಕರೆ

ದಾವಣಗೆರೆ, ನ.6- ಶ್ರೀ ಬಾಬಾ ರಾಮ್‌ದೇವ್‌ಜೀ ಮಾತಾಜೀ ಮಂದಿರ ಟ್ರಸ್ಟ್ ರಕ್ತವೀರ ಸೇವಾರ್ಥ ಫೌಂಡೇಷನ್ ಮತ್ತು ಸಿದ್ದಗಂಗಾ ಶ್ರೀ ಸ್ವಯಂ ಪ್ರೇರಿತ ರಕ್ತ ಕೇಂದ್ರ ಮತ್ತು ವಿಭಜನ ಘಟಕದ ವತಿಯಿಂದ ಶ್ರೀ ಬಾಬಾ ರಾಮ್‌ದೇವ್ ಮಂದಿರದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ನಿನ್ನೆ ನಡೆಸಲಾಯಿತು.

ಅಧ್ಯಕ್ಷತೆಯನ್ನು ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಹಿಸಿ ಮಾತನಾಡಿ, ರಕ್ತದಾನ ಶ್ರೇಷ್ಠದಾನ ಪ್ರತಿಯೊಬ್ಬ ವಯಸ್ಕರು ರಕ್ತದಾನ ಮಾಡಿದರೆ, ಆರೋಗ್ಯಪೂರ್ಣ ಸಮಾಜವನ್ನು ಕಟ್ಟಲು ಸಾಧ್ಯವಾಗುತ್ತದೆ. ರಕ್ತದಾನವು ಜೀವ ಉಳಿಸುತ್ತದೆ. ಯಾರು ರಕ್ತದಾನ ಮಾಡುತ್ತಾರೋ ಅವರಿಗೆ ಹೃದಯಾಘಾತವಾಗುವುದಿಲ್ಲ. ಹೃದಯದ ಆರೋಗ್ಯಕ್ಕಾಗಿ ರಕ್ತದಾನ ಮಾಡಬೇಕು. ರಕ್ತದಲ್ಲಿನ ಹೆಚ್ಚಿನ ಕೊಲೆಸ್ಟ್ರಾಲ್ ಕರಗಿಸಲು ಜಿಮ್‌ಗೆ ಹೋಗುವ ಅವಶ್ಯಕತೆಯೇ ಇಲ್ಲ. ರಕ್ತದಾನದಿಂದ ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ. ಆಹಾರದ ನಿಯಂತ್ರಣವಿದ್ದರೆ ಯಾವ ಕಾಯಿಲೆಗಳು ಬರುವುದಿಲ್ಲ. ರಕ್ತದಾನವು ಜೀವನದ ಒಳ್ಳೆಯ ಕಾರ್ಯವಾಗಿದೆ ಎಂದು ಶ್ರೀಗಳು ಹೇಳಿದರು.

ಶಿಬಿರದ ಆಯೋಜಕರಾದ ರಕ್ತವೀರ ಸೇವಾರ್ಥ ಫೌಂಡೇಷನ್‌ನ ಜೀತೇಂದ್ರ ವೈಷ್ಣವ್, ರಾಮ್‌ಚಂದ್ರ ಚೌಧರಿ, ಲಕ್ಷ್ಮಣ ಸಿರವಿ, ಪ್ರಕಾಶ್ ಜಾಂಗೀಡ್, ಸಾಲೂರಾಮ್ ಚೌಧರಿ, ವಿನೋದ್, ಪಾರೀಕ್ ಮತ್ತು ಸಮಾಜದವರು ಉಪಸ್ಥಿತರಿದ್ದರು.

# ನಂದಗಡಕ್ಕೆ ಭೇಟಿ ನೀಡಿದ ವಚನಾನಂದ ಶ್ರೀಗಳು



ದಾವಣಗೆರೆ, ನ.5- ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ನಂದಗಡದಲ್ಲಿರುವ ಸ್ವಾತಂತ್ರ್ಯ ಸೇನಾನಿ, ವೀರರಾಣಿ ಕಿತ್ತೂರು ಚೆನ್ನಮ್ಮಾಜಿಯ ಬಲಗೈ ಬಂಟ ಸಂಗೊಳ್ಳಿ ರಾಯಣ್ಣನ ಐಕ್ಯಭೂಮಿಗೆ ಹರಿಹರದ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ಭೇಟಿ ನೀಡಿ, ಗೌರವ ನಮನ ಸಲ್ಲಿಸಿದರು.


**SHREE VEERABHADRESHWARA CONSULTANCY SERVICES**

*CIVIL ENGINEERS AND DEVELOPERS*

# 80/18, Opp. P.J. Lodge, A.V.K. College Road, P.J. Extension, DAVANGERE-577 002.

Cell: 9916173399, 9343277422

WE OFFER THE FOLLOWING SERVICE :



- CONSTRUCTION CONSULTANTS
- ARCHITECTURAL VASTU PLAN
- ESTIMATION & VALUATION
- 3D VIEW & INTERIOR DESIGN .
- ASSISTANCE FOR BUILDING LICENSE PLAN
- ASSISTANCE FOR LAY OUT DESIGN & LAND DEVELOPMENT
- A4 TO AO PLOTTER PRINTS & BLUE PRINTS

## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ಸ್ಮಾರ್ಟ್‌ಸಿಟಿ ವಾಸಿ **ದೊಗ್ಗಳ್ಳಿ ದಯಾನಂದ ಬಿನ್ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ** ಇವರ ಮಗ ವಾಸ: 212/2, ನರಸರಾಜ ರಸ್ತೆ, ದಾವಣಗೆರೆ ಆದ ನಾನು ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ:

**ಶ್ರೀಮತಿ ವಿನುತ ಕೋಂ ಲೇಟ್ ಡಿ.ಚಂದ್ರಶೇಖರ್** ಇವರು ಷೆಡ್ಯೂಲ್ ದಾವಾ ಸೊತ್ತಿನಲ್ಲಿ 1/5ನೇ ಭಾಗದಲ್ಲಿ ತಮ್ಮ ಹಿಸ್ಸೆಯ ಹಕ್ಕಿನ ಸಲುವಾಗಿ ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ, ದಾವಣಗೆರೆ ಇವರಲ್ಲಿ ಡಿಕ್ರಿ ಕೋರಿ ಎಫ್.ಡಿ.ಪಿ.ನಂ.21/2015 ರಂತೆ ಮೇಲ್ಕಂಡ ನನ್ನ ಮತ್ತು ಇನ್ನಿತರೆಯವರ ವಿರುದ್ಧ ದಾವೆ ಸಲ್ಲಿಸಿ, ಈ ಬಗ್ಗೆ ದಿನಾಂಕ: 03-11-2021 ರಂದು ಜನತಾವಾಣಿ ಕನ್ನಡ ದಿನ ಪತ್ರಿಕೆ ಪ್ರಕಟಣೆಯಲ್ಲಿ ವಕೀಲರ ಸಮ್ಮುಖದಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ಕೊಟ್ಟಿದ್ದು ಸರಿಯಷ್ಟೆ. ಆದರೆ ಸದರಿ ಷೆಡ್ಯೂಲ್ ದಾವೆ ಸೊತ್ತು ಒಟ್ಟು ಕುಟುಂಬದ ಎಲ್ಲಾ ಆಸ್ತಿಯಾಗಿದ್ದು, ಸದರಿ ಒಟ್ಟು ಕುಟುಂಬಕ್ಕೆ ಸಂಬಂಧಿಸಿದ ವಿವಿಧ ಬ್ಯಾಂಕುಗಳಲ್ಲಿ ಸಾಲ ಪಡೆದಿದ್ದು, ಸದರಿ ಸಾಲಕ್ಕೆ ಕುಟುಂಬದ ಸದಸ್ಯರಾದ **1. ವಿನುತ ಕೋಂ ಲೇಟ್ ಡಿ.ಚಂದ್ರಶೇಖರ್, 2.ಶ್ರೀಮತಿ ಡಿ.ಗೀತಾ ಗೌಡ, 3. ಡಿ.ರೀತಾ** ಮತ್ತು **4. ಡಿ.ಲತಾ ಮತ್ತು ದಯಾನಂದ ಬಿನ್ ದೊಗ್ಗಳ್ಳಿ ಪರಮೇಶ್ವರಪ್ಪ** ಐದು ಜನ ಹಿಸ್ಸೆದಾರರಾಗಿದ್ದು, ಆಸ್ತಿಗೂ ಮತ್ತು ಬ್ಯಾಂಕಿನಲ್ಲಿರುವ ಸಾಲಕ್ಕೂ ಎಲ್ಲರೂ ಹೊಣೆಗಾರರಾಗಿರುತ್ತಾರೆಂದು ಈ ಮೂಲಕ ಪ್ರಕಟಣೆ ನೀಡಲಾಗಿದೆ. ಮೇಲ್ಕಾಣಿಸಿದ ಕುಟುಂಬ ಸದಸ್ಯರೊಂದಿಗೆ ಯಾರಾದರೂ ಹಣಕಾಸು ವ್ಯವಹಾರವನ್ನು ನಡೆಸಿದರೆ ಅದಕ್ಕೆ ಯಾವೊಬ್ಬ ಸದಸ್ಯರು ಹೊಣೆಗಾರರಾಗಿರುವುದಿಲ್ಲ.

**ದೊಗ್ಗಳ್ಳಿ ದಯಾನಂದ**
**ಮೊ ನಂ. 82177 14090**

# ಸುಲ್ತಾನ್‌ಬೀ ಸೇವೆ ಯುವಜನತೆಗೆ ಮಾದರಿ



### ಜಗಳೂರು

ಜಗಳೂರು, ನ.6- ಕರ್ನಾಟಕ ಸರ್ಕಾರದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ ಸುಲ್ತಾನ್‌ಬೀ ಅವರ ಸಮಾಜ ಸೇವಾ ಕಾರ್ಯಗಳು ಇಂದಿನ ಯುವಜನತೆಗೆ ಮಾದರಿ ಎಂದು ಶಾಸಕ ಎಸ್.ವಿ. ರಾಮಚಂದ್ರ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮೀಪದ ಗೊಲ್ಲರಹಟ್ಟಿ ಗ್ರಾಮದಲ್ಲಿ ಪ್ರಶಸ್ತಿ ಪುರಸ್ಕೃತರಾದ ಸುಲ್ತಾನ್‌ಬೀ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಸುಲ್ತಾನ್‌ಬೀ ಅವರನ್ನು ಲಯನ್ಸ್ ಕ್ಲಬ್, ಕರವೇ, ಜೈ ಕರ್ನಾಟಕ ಸಂಘಟನೆ ಸೇರಿದಂತೆ ಹಲವಾರು ಸಂಘ-ಸಂಸ್ಥೆಗಳು ಗೌರವಿಸಿವೆ. ಕನ್ನಡ ಸಾಹಿತ್ಯ ಪರಿಷತ್ತು 'ಗ್ರಾಮೀಣ ಸಿರಿ' ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಇದೀಗ ರಾಜ್ಯಮಟ್ಟದ ಪ್ರಶಸ್ತಿ ಬಂದಿರುವುದು ಸ್ವಾಗತಾರ್ಹ ಎಂದರು.

ಸುಲ್ತಾನ್‌ಬೀ ಅವರು ಶತಾಯುಷಿಯಾಗಿ ಸಂತಸದಿಂದ ಜೀವನ ಸಾಗಿಸಲಿ. ದಶಕಗಳಿಂದ ಸೂಲಗಿತ್ತಿ ಕಾಯಕದ ಜೊತೆ ಹಾವು ಹಿಡಿಯುವ ಹಾಗೂ ನಾಟಿ ವೈದ್ಯಕೀಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿರುವ ಅವರನ್ನು ರಾಜ್ಯದ ನಮ್ಮ ಆಡಳಿತದ ಸರ್ಕಾರ ಗುರುತಿಸಿ, ಬರದ ನಾಡಿನ ವೃದ್ಧೆಗೆ ರಾಜ್ಯ ಮಟ್ಟದ ಪ್ರಶಸ್ತಿ ನೀಡಿರುವುದು ಪ್ರತಿಯೊಬ್ಬರಿಗೂ ಗೌರವ ತಂದಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಇದೇ ವೇಳೆ ಶಾಸಕರು ಶಾಲು ಹೊದಿಸಿ, 20 ಸಾವಿರ ರೂ. ನಗದು, ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಪ.ಪಂ. ಅಧ್ಯಕ್ಷ ಸಿದ್ದಪ್ಪ, ಮಾಜಿ ಅಧ್ಯಕ್ಷ ತಿಪ್ಪೇಸ್ವಾಮಿ, ಸದಸ್ಯರಾದ ಲುಕ್ಮಾನ್‌ಖಾನ್, ಪಾಪಲಿಂಗಪ್ಪ, ದೇವರಾಜ್, ಪ.ಪಂ. ನಾಮನಿರ್ದೇಶಿತ ಸದಸ್ಯ ಬಿ.ಪಿ. ಸುಭಾನ್, ಬಿಜೆಪಿ ಮುಖಂಡರಾದ ಕೆ.ಎಸ್. ಪ್ರಭು, ಇಂದ್ರೇಶ್, ಬಿಳಿಚೋಡು ಮಹೇಶ್, ಪಿಂಜಾರ ಸಮಾಜದ ಮುಖಂಡರಾದ ಟೀಪು ಸಾಬ್, ಬಾಷಾ, ಖಲಂದರ್ ಇನ್ನಿತರರಿದ್ದರು.

# ಹರಿಹರೇಶ್ವರ ದೇವಾಲಯ ಅಭಿವೃದ್ಧಿಗೆ ಆದ್ಯತೆ



### ಡಿಸಿ ಮಹಾಂತೇಶ್ ಬೀಳಗಿ

ಹರಿಹರ, ನ.6- ನನ್ನ ಆಡಳಿತಾವಧಿಯಲ್ಲಿ ಶ್ರೀ ಹರಿಹರೇಶ್ವರ ದೇವಾಲಯ ಅಭಿವೃದ್ಧಿಗೆ ಎಲ್ಲಾ ರೀತಿಯ ಆದ್ಯತೆ ನೀಡುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಕೇದಾರನಾಥದಲ್ಲಿ ಶ್ರೀ ಆದಿ ಶಂಕರಾಚಾರ್ಯರ ಮೂರ್ತಿ ಸ್ಥಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಪ್ರಧಾನಿ ಮೋದಿಯವರ ನೇರ ಪ್ರಸಾರ ಕಾರ್ಯಕ್ರಮ ನಿಮಿತ್ತ ನಗರದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಅಂದು ಬೆಳಗ್ಗೆ ದೇವರಿಗೆ ವಿಶೇಷ ರುದ್ರಾಭಿಷೇಕ, ವಿಪ್ರರಿಂದ ರುದ್ರಪಠಣ, ಶಂಕರಾಚಾರ್ಯರ ಸ್ತೋತ್ರಗಳ ಪಠಣ, ಶಿವ ಅಷ್ಟೋತ್ತರ ಪಠಣ ಮಹಾಮಂಗಳಾರತಿ ಮಾಡಿ ಸಂಜೆ ಶಿವತಾಂಡವ ನೃತ್ಯ ನಡೆಯಿತು.

ಭಾರತದ ಇತಿಹಾಸ ಪರಂಪರೆಯಲ್ಲಿ ಶಂಕರಾಚಾರ್ಯರರ ಕೊಡುಗೆ ಮೆಚ್ಚುವಂತದ್ದು, ಅಂತಹ ಮಹಾನ್ ವ್ಯಕ್ತಿಗಳು ನಗರದ ಐತಿಹಾಸಿಕ ಶ್ರೀ ಹರಿಹರೇಶ್ವರ ದೇವಾಲಯಕ್ಕೆ ಭೇಟಿ ಮಾಡಿದ್ದು ಇಲ್ಲಿನ ಜನತೆಯ ಸೌಭಾಗ್ಯ. ಅವರ ಹೆಸರನ್ನು ಅಜರಾಮರವಾಗಿ ಉಳಿಸುವ ದೃಷ್ಟಿ ಯಿಂದ ಕೇಂದ್ರ ಸರ್ಕಾರ ಕೇದಾರನಾಥ್‌ನಲ್ಲಿ ಮೂರ್ತಿಯನ್ನು ಸ್ಥಾಪನೆ ಮಾಡಿದೆ ಎಂದು ತಿಳಿಸಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ದೇಶದಲ್ಲಿ ಶಂಕರಾಚಾರ್ಯರ ಕೊಡುಗೆ ಅಪಾರವಾಗಿದೆ. ಹರಿಹರ ನಗರದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡಿರುವುದು ನಮ್ಮ ಸೌಭಾಗ್ಯ. ಇಂತಹ ಕಾರ್ಯಕ್ರಮಗಳು ನಿರಂತರವಾಗಿ ಈ ಕ್ಷೇತ್ರದಲ್ಲಿ ನಡೆಯುವಂತಾಗಲಿ. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸಹ ಹಗಲು-ರಾತ್ರಿ ಶ್ರಮವಹಿಸಿ ಉತ್ತಮವಾಗಿ ಕೆಲಸ ಮಾಡಿದ್ದರಿಂದ ಯಶಸ್ವಿಯಾಗುವುದಕ್ಕೆ ಕಾರಣವಾಯಿತು ಎಂದು ಹೇಳಿದರು.

ಈ ವೇಳೆ ದಾವಣಗೆರೆ ನಮನ ಅಕಾಡೆಮಿಯಿಂದ ನೃತ್ಯ ಕಾರ್ಯಕ್ರಮ ಮತ್ತು ಯಮನೂರು ಸಾಬ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ, ಎಇಇ ಬಿರಾದಾರ, ದಾವಣಗೆರೆ ಆರೋಗ್ಯಾಧಿಕಾರಿ ನಾಗರಾಜ್, ಪ್ರವಾಸೋದ್ಯಮ ಸಹಕಾರಿ ನಿರ್ದೇಶಕ ಪಾಲಾಕ್ಷಿ, ರಮೇಶ್, ರವಿಚಂದ್ರ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಕಾರ್ಯದರ್ಶಿ ಜಗದೀಶ್, ನಗರಸಭೆ ಉಪಾಧ್ಯಕ್ಷ ಬಾಬುಲಾಲ್, ಸದಸ್ಯ ಶಂಕರ್ ಖಟಾವ್ಕರ್, ಅರ್ಚಕ ಗುರುಪ್ರಸಾದ್, ಕಂದಾಯ ಇಲಾಖೆಯ ಸಮೀರ್, ಅಜಿತ್ ಸಾವಂತ್ ಇನ್ನಿತರರಿದ್ದರು.

## ಹೊಳೆಸಿರಿಗೆರೆ : ಸಂಭ್ರಮದ ರಾಜ್ಯೋತ್ಸವ



ಮಲೇಬೆನ್ನೂರು, ನ.6- ಹೊಳೆಸಿರಿಗೆರೆ ಗ್ರಾಮದ ಸುಭಾಷ್ ಚಂದ್ರಬೋಸ್ ಉಸ್ತುವಾರಿ ಮುಂದುವರಿಕೆ ಶಿಕ್ಷಣ ಕೇಂದ್ರದಲ್ಲಿ 66ನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ತಾ.ಪಂ. ಮಾಜಿ ಸದಸ್ಯ ಕೆ.ಜಿ.ಕೊಟ್ರೇಶ್‌ಗೌಡ, ಪ್ರಗತಿಪರ ರೈತ ಕುಂದೂರು ಮಂಜಪ್ಪ, ಶಿಕ್ಷಣ ಕೇಂದ್ರದ ಎಂ.ಶಿವಕುಮಾರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮಲೇಬೆನ್ನೂರು : ದೀಪಾವಳಿ ಸಂಭ್ರಮ



ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿ ತಾಂಡಾದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ಲಂಬಾಣಿ ಸಮುದಾಯದವರು ಸಾಮೂಹಿಕ ನೃತ್ಯ ಮಾಡಿ ಸಂಭ್ರಮಿಸಿದರು.

## ದಿ ಮಹಾಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ನಂ. : 417/4ಎ/4 ಬಿ, "ಬೆನಕೇಶ್ ಪ್ಲಾಜಾ" ಹಳೆ ಜನತಾವಾಣಿ ಪ್ರೆಸ್ ಪಕ್ಕ, ದೀಕ್ಷಿತ್ ರಸ್ತೆ,
ಕೆ.ಬಿ. ಬಡಾವಣೆ, ದಾವಣಗೆರೆ-577 002. ಮೊ. : 94484 23715

### ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

**ಮಾನ್ಯ ಸದಸ್ಯರೇ,**

ನಮ್ಮ ಸಂಘದ 2020-21ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ : 07.11.2021ನೇ ಭಾನುವಾರ ಮಧ್ಯಾಹ್ನ 12.15 ಗಂಟೆಗೆ ಕುವೆಂಪು ಕನ್ನಡ ಭವನ, ವಿದ್ಯಾನಗರ ಮುಖ್ಯರಸ್ತೆ, ದಾವಣಗೆರೆಯಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಕೆ.ಎನ್. ಶಿವಲಿಂಗಪ್ಪನವರ** ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಕಾರಣ ಸಂಘದ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

**ಆಡಳಿತ ಮಂಡಳಿಯ ಪರವಾಗಿ**
**ಶ್ರೀ ಎಸ್. ಬಸವರಾಜ್, ಕಾರ್ಯದರ್ಶಿ**

**ಸೂಚನೆ :** ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಆಗಮಿಸಬೇಕಾಗಿ ವಿನಂತಿ. ಸದಸ್ಯರುಗಳು ತಮ್ಮ ವಿಳಾಸ ಬದಲಾಗಿದ್ದಲ್ಲಿ ಕೂಡಲೇ ಸಂಘದ ಕಾರ್ಯಾಲಯಕ್ಕೆ ಬಂದು ಲಿಖಿತವಾಗಿ ನೂತನ ವಿಳಾಸವನ್ನು ತಿಳಿಸಬೇಕು. ಸಂಘದ ಸದಸ್ಯರು ತಮ್ಮ ಡಿವಿಡೆಂಡ್ (ಲಾಭಾಂಶ)ಅನ್ನು ಪ್ರಕಟಿಸಿದ ಮೂರು ವರ್ಷದೊಳಗಾಗಿ ಪಡೆಯತಕ್ಕದ್ದು. ಪಡೆಯದೇ ಇದ್ದಲ್ಲಿ ಅದನ್ನು ಮೀಸಲು ನಿಧಿ (ರಿಸರ್ವ್ ಫಂಡ್) ಗೆ ವರ್ಗಾಯಿಸಲಾಗುವುದು. ಸಂಘದ ಸದಸ್ಯರುಗಳು 5 ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ 3 ಮಹಾಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ. ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಪಾಡುವುದು ಕಡ್ಡಾಯ.

# ಸುಂಕದಕಟ್ಟೆಯಲ್ಲಿ ಗೋ ಪೂಜೆ



ಹೊನ್ನಾಳಿ

ಹೊನ್ನಾಳಿ, ನ.6- ತಾಲ್ಲೂಕಿನ ಸುಂಕದಕಟ್ಟೆ ಗ್ರಾಮದ ಮುಜರಾಯಿ ದೇವಸ್ಥಾನ ಶ್ರೀ ಮಂಜುನಾಥ ಸ್ವಾಮಿ, ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಪ್ರಧಾನ ಅರ್ಚಕ ಎಸ್. ರಾಜುಸ್ವಾಮಿ ಶುಕ್ರವಾರ ಸಂಜೆ ಗೋ ಪೂಜೆ ನೆರವೇರಿಸಿದರು. ಸ್ಥಳೀಯ ಹಳ್ಳಿಕಾರ್ ತಳಿಯ ಹಸು ಹಾಗೂ ಕರುಗಳಿಗೆ ಪೂಜೆ ನೆರವೇರಿಸಿದರು. ಗ್ರಾ.ಪಂ ಸದಸ್ಯರಾದ ಡಿ.ಬಿ.ಶ್ರೀನಾಥ್, ಚಂದ್ರಮ್ಮ, ತಹಸೀಲ್ದಾರ್ ಡಿ.ಎಂ. ಸುರೇಶ್, ಪಿಎಸ್‌ಐ ಬಸನಗೌಡ ಬಿರಾದಾರ್, ರಾಜಸ್ವ ನಿರೀಕ್ಷಕ ಕೆ. ಮುನೇಶ್, ಪಶು ನಿರೀಕ್ಷಕ ಎಂ.ಬಸವರಾಜ್, ಮುಖಂಡರಾದ ಸಿದ್ದಪ್ಪ, ಮಂಜುನಾಥ್, ಎ.ಕೆ.ರುದ್ರಪ್ಪ ಮತ್ತಿತರರಿದ್ದರು.

# ಕಾರ್ ರ‍್ಯಾಲಿಯಲ್ಲಿ ಅಂಧ ಮಕ್ಕಳು



### ರಾಣೇಬೆನ್ನೂರು

ರಾಣೇಬೆನ್ನೂರು, ಅ.6- ಪಟ್ಟಣದ ಸ್ನೇಹದೀಪ ಅಂಧ, ಅಂಗವಿಕಲರ ಸಂಸ್ಥೆ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ರೌಂಡ್ ಟೇಬಲ್ ಇಂಡಿಯಾ ಮತ್ತು ಲೇಡಿಸ್ ಸರ್ಕಲ್ ಇಂಡಿಯಾ ವತಿಯಿಂದ ಆಯೋಜಿಸಲಾಗಿದ್ದ ಬ್ಲೈಂಡ್ ಕಾರ್ ರ‍್ಯಾಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ 30 ಅಂಧ ವಿದ್ಯಾರ್ಥಿಗಳು ಭಾಗವಹಿಸಿದ್ದು, ಸಂಸ್ಥೆಯ ಕಾರ್ಯವೈಖರಿ ಕುರಿತು ರೌಂಡ್ ಟೇಬಲ್ ಕ್ಲಬ್ ಸದಸ್ಯ ಪ್ರವೀಣ ಹೆಬಸೂರು ಮೆಚ್ಚುಗೆ ವ್ಯಕ್ತಪಡಿಸಿದರು.

# ಕೋಡಿ ಕ್ಯಾಂಪ್‌ನ ಶ್ರೀ ಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಪೂಜೆ



ದಾವಣಗೆರೆ, ನ.6- ಇಲ್ಲಿಗೆ ಸಮೀಪದ ಮಾಗಾನಹಳ್ಳಿ ಕೋಡಿ ಕ್ಯಾಂಪನಲ್ಲಿರುವ ಶ್ರೀ ಗುರು ಬಸವೇಶ್ವರ ನಗರದ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಇಂದಿನಿಂದ ಒಂದು ತಿಂಗಳ ಕಾಲ ಪ್ರತಿದಿನ ಮುಂಜಾನೆ 7 ರಿಂದ 9ರವರೆಗೆ ವಿಶೇಷ ಅಭಿಷೇಕ ಮತ್ತು ಪೂಜೆ ನಡೆಯಲಿದೆ. ಪ್ರಪಂಚವು ಕೊರೊನಾದಿಂದ ಮುಕ್ತಿ ಹೊಂದಲಿ. ಆ ಮೂಲಕ ಸರ್ವರಿಗೂ ಆರೋಗ್ಯ ಭಾಗ್ಯ, ನೆಮ್ಮದಿ, ಸುಖ-ಶಾಂತಿ ಸಿಗುವಂತಾಗಲಿ ಎಂದು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯಲ್ಲಿ ಪ್ರಾರ್ಥಿಸಿ ಅಭಿಷೇಕ, ಪೂಜೆ ನೆರವೇರಿಸಲಾಗುತ್ತದೆ.

**ವಿವರಕ್ಕೆ ಸಂಪರ್ಕಿಸಿ :** ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (94483 56968), ಬಿ.ಚಿದಾನಂದ (98445 28449), ಮಲ್ಲಾಬಾದಿ ಗುರುಬಸವರಾಜು (79757 97079).

## ಹರಿಹರ : ತರಬೇತಿಗೆ ಅರ್ಜಿ ಆಹ್ವಾನ

ಹರಿಹರ, ಅ. 26- ಹರಿಹರದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಲ್ಲಿ ತಂತ್ರಜ್ಞಾನ ತರಬೇತಿಗಳ ಸಂಸ್ಥೆಗಳಿಗೆ ನೆರವು ಯೋಜನೆಯ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ-ಟಿಎಸ್‌ಪಿ) ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ, ಯುವತಿಯರಿಗೆ ಉದ್ಯೋಗಾವಕಾಶಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಇದೇ ದಿನಾಂಕ 10 ಕೊನೆಯ ದಿನಾಂಕವಾಗಿರುತ್ತದೆ. ವಿವರಗಳಿಗೆ ಪ್ರಾಂಶುಪಾಲರು, ಜಿಟಿಟಿಸಿ, 22 ಸಿ ಮತ್ತು ಡಿ, ಕೆಐಎಡಿಬಿ, ಇಂಡಸ್ಟ್ರಿಯಲ್ ಏರಿಯಾ ಹರ್ಲಾಪುರ, ಹರಿಹರ. ದೂ.ಸಂ. 08192-243937, 9916908111 ಗೆ ಸಂಪರ್ಕಿಸಬಹುದು.

# ನಮನ ಅಕಾಡೆಮಿಯಿಂದ ಸ್ವಾತಂತ್ರ್ಯ ನಮನ ನೃತ್ಯರೂಪಕ



ದಾವಣಗೆರೆ, ನ.6- ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 66ನೇ ಕನ್ನಡ ರಾಜ್ಯೋತ್ಸವ ನಿಮಿತ್ತ 'ಕನ್ನಡಕ್ಕಾಗಿ ನಾವು' ಅಭಿಯಾನದ ಅಂಗವಾಗಿ ನಡೆದ ದೇಶಭಕ್ತಿ ಗೀತೆಗಳು ಹಾಗೂ ವಾದ್ಯ ಸಂಗೀತ ಕಾರ್ಯಕ್ರಮದಲ್ಲಿ ನಮನ ಅಕಾಡೆಮಿಯವರು ಸ್ವಾತಂತ್ರ್ಯ ನಮನ ಹೆಸರಿನ ನೃತ್ಯ ರೂಪಕ ಪ್ರಸ್ತುತ ಪಡಿಸಿದರು.

ನಗರದ ಎಜು ಏಶಿಯಾ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ಕುರಿತಾದ ಈ ನೃತ್ಯರೂಪಕದ ಪರಿಕಲ್ಪನೆ, ನೃತ್ಯ ಸಂಯೋಜನೆ ಹಾಗೂ ವಿನ್ಯಾಸವನ್ನು ನೃತ್ಯ ಗುರು ಡಿ.ಕೆ. ಮಾಧವಿ ನಿರ್ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಚಿತ್ರ ಕಲಾವಿದ ರವಿ ಹುದ್ದಾರ್, ನಮನ ಅಕಾಡೆಮಿಯ ನಿರ್ದೇಶಕರಾದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಪುರಸ್ಕೃತರಾದ ನಂದಾ ಡಿ. ಕುಲಕರ್ಣಿ ಹಾಗೂ ಅಧ್ಯಕ್ಷ ಕೆ.ಎನ್. ಗೋಪಾಲಕೃಷ್ಣ ಉಪಸ್ಥಿತರಿದ್ದರು.

## ವಾರ ಭವಿಷ್ಯ

**ದಿನಾಂಕ : 07.11.2021 ರಿಂದ 13.11.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ) (ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮತ್ತೊಬ್ಬರ ಮೊರೆಹೋಗದೆ ವಿಧಿಯಿಲ್ಲ. ಹೆಚ್ಚಿದ ಆತಂಕ ಮನಸ್ಸಿನ ನೆಮ್ಮದಿ ಕೆಡಿಸಬಹುದು. ಆದಾಯ ಮೀರಿದ ಖರ್ಚುಗಳಿರುವುದರಿಂದ ಹಿಡಿತ ಸಾಧಿಸಲು ಪ್ರಯತ್ನಿಸುವಿರಿ. ಕಷ್ಟದಲ್ಲಿರುವ ಸ್ನೇಹಿತರಿಗೆ ನೆರವಾಗುವ ಪ್ರಸಂಗ. ಹೊಸ ಆದಾಯದ ಮೂಲ ತೋರಲಿದೆ. ಹಿರಿಯ ಆರೋಗ್ಯದಲ್ಲಿ ಸ್ಥಿರತೆ. ಮಹಿಳೆಯರಿಗೆ ಉತ್ತಮ ದಿನಗಳು. ಭಿನ್ನಾಭಿಪ್ರಾಯ ಮೂಡಿದ್ದ ಕುಟುಂಬದಲ್ಲಿ ಸಾಮರಸ್ಯ ಮೂಡುವುದು. ವಿದ್ಯಾರ್ಥಿಗಳಲ್ಲಿ ಹೊಸ ಆಶಾಭಾವನೆ ಕಂಡು ಬರಲಿದೆ. ಪಶು ಪಕ್ಷಿಗಳಿಗೆ ಆಹಾರ ನೀಡಿ. ಸಾಧ್ಯವಾದಲ್ಲಿ ಬಡವರಿಗೆ ಸಹಾಯ ಮಾಡಿ. ಗುರುಗಳನ್ನು ಸ್ಮರಿಸಿ. ಸೋಮ, ಮಂಗಳ, ಗುರು ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2) (ಇ.ಉ.ಎ.ಒ.ವ.ವಿ.ವು.ವೆ.ವೋ)**

ಅನಿವಾರ್ಯವಾಗಿದ್ದ ದೂರದ ಪ್ರಯಾಣದಿಂದ ದೇಹಾಲಸ್ಯವಾಗಲಿದೆ. ಸರಿಯಾದ ವೈದ್ಯಕೀಯ ಚಿಕಿತ್ಸೆ ಪಡೆಯಿರಿ. ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿ ಬರಲಿದೆ. ಅನಿರೀಕ್ಷಿತವಾಗಿ ಕುಲದೇವತಾ ದರ್ಶನ ಭಾಗ್ಯ ದೊರೆಯಲಿದೆ. ಉದ್ಯೋಗದಲ್ಲಿ ನಿರಾಸಕ್ತಿ ತೋರಿದಲ್ಲಿ ತೊಂದರೆ. ವಿದ್ಯಾರ್ಥಿಗಳು ಛಲಬಿಡದೆ ಏಕಾಗ್ರತೆಯಿಂದ ಯತ್ನಿಸಿದಲ್ಲಿ ಯಶಸ್ಸು ಸಾಧ್ಯ. ಅರ್ಧಕ್ಕೆ ನಿಂತಿದ್ದ ಕೆಲಸಗಳು ಗೆಳೆಯರ ನೆರವಿನಿಂದ ಚಾಲನೆಗೊಳ್ಳಲಿವೆ. ವೈಯಕ್ತಿಕ ವಿಚಾರದಲ್ಲಿ ಅತ್ಯಾತುರ ಸಲ್ಲದು. ಗುತ್ತಿಗೆದಾರರಿಗೆ ಹಳೇ ಬಾಕಿ ಹಣ ಇಷ್ಟರಲ್ಲೇ ಕೈ ಸೇರುವುದು. ಮತ್ತೊಬ್ಬರ ಹಣಕಾಸಿನ ವಿಚಾರದಲ್ಲಾಗಲೀ ಅಥವಾ ವೈಯಕ್ತಿಕ ವಿಚಾರದಲ್ಲಾಗಲೀ ನಿಮ್ಮ ಪ್ರವೇಶ ಬೇಡ. ಬುಧ, ಗುರು, ಶುಕ್ರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3) (ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಹೊಸ ಉದ್ಯಮದಲ್ಲಿ ಯಶಸ್ಸು ಸಿಗಲು ಆಲಸ್ಯ ಬಿಡಿ. ಅನಗತ್ಯ ಕೋಪದಿಂದ ಬಂಧುಗಳೊಂದಿಗೆ ದ್ವೇಷ, ವೈಯಕ್ತಿಕ ನಷ್ಟವಾಗಬಹುದು. ನೌಕರಿ ಬದಲಾವಣೆ ಸಕಾರಾತ್ಮಕವಾಗಿ ಪರಿಣಮಿಸಲಿದೆ. ಆಸ್ತಿ ಪಾಲುದಾರಿಕೆಯಲ್ಲಿ ನಿಮ್ಮ ಪಾಲಿಗೆ ಬಂದುದರಲ್ಲೇ ಸಂತೃಪ್ತಿ ಪಡೆಯುವಿರಿ. ಮಹಿಳೆಯರು ಸಕಾರಾತ್ಮಕ ಚಿಂತನೆ ಮಾಡಿ. ನಿವೃತ್ತಿಯಂಚಿನಲ್ಲಿರುವವರು ತಮ್ಮ ಮುಂದಿನ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವುದು ಉತ್ತಮ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಹಿರಿಯರು ಕೊಡುವ ಸಲಹೆಯಂತೆ ನಡೆದು ಕೊಳ್ಳಿ. ಆದಾಯದಲ್ಲಿ ಚೇತರಿಕೆ ಕಾಣಲಿದೆ. ಭಾನು, ಸೋಮ, ಬುಧ ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ) (ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಪರೋಪಕಾರ ಒಳ್ಳೆಯದೇ ಆದರೂ ಯೋಗ್ಯರಿಗೆ ತಲುಪುವಂತೆ ಮಾಡುವ ಜವಾಬ್ದಾರಿ ಇರಲಿ. ನೆರೆಹೊರೆಯವರಿಗೆ ನಿಮ್ಮ ಬಗ್ಗೆಯಿದ್ದ ನಕಾರಾತ್ಮಕ ಅಭಿಪ್ರಾಯ ಬದಲಾಗಲಿದೆ. ವೃತ್ತಿಯಲ್ಲಿ ದೃಢ ಹಾಗೂ ಶಿಸ್ತುಬದ್ಧ ನಿರ್ಧಾರದಿಂದ ಉತ್ತಮ ಫಲ ಕಾಣಲು ಸಾಧ್ಯ. ಹಣದ ಹರಿವು ಧಾರಾಳವಾಗಲಿದೆ. ಹೆಚ್ಚಿನ ಆದಾಯ ವಿನಿಯೋಗಿಸುವುದು ಲೇಸು. ವ್ಯಾಪಾರದಲ್ಲಿ ಎದುರಾಳಿಗಳ ದಾಳಿಗೆ ತತ್ತರಿಸಿ ಹೋಗುವ ಸಂಭವ. ಚಿಂತೆ ಬೇಡ. ಆ ಸಮಯಕ್ಕೆ ಅವರ ತಂತ್ರಕ್ಕೆ ಪ್ರತಿ ತಂತ್ರವೂ ಹೊಳೆಯಲಿದೆ. ಅವಿವಾಹಿತ ಮಗಳಿಗೆ ಉತ್ತಮ ಸಂಬಂಧ ಕೂಡಿ ಬರಲಿದೆ. ಪದವೀಧರರಿಗೆ ಸಾಧಾರಣ ನೌಕರಿ ದೊರೆಯಲಿದೆ. ಸೋಮ, ಮಂಗಳ, ಗುರು ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1) (ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಅತಿವೃಷ್ಟಿಯಿಂದ ಅಥವಾ ನೆರೆ ಹಾವಳಿಗೆ ಸಿಲುಕಿದವರಿಗೆ ಸರ್ಕಾರದಿಂದ ಸಿಗಬೇಕಾಗಿರುವ ಸಕಲ ಸವಲತ್ತುಗಳು ಸಿಗಲಿವೆ. ಹೊಸ ಉದ್ಯಮ ಆರಂಭಿಸಿರುವ ಯುವಕರು ತಲ್ಲೀನತೆ ಹೊಂದುವರು. ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಉತ್ತಮ ಭರವಸೆ ಸಿಗಲಿದೆ. ಮನಸ್ಸಿನ ಹಲವು ಸಂಶಯಗಳು ದೂರವಾಗಲಿವೆ. ಮಡದಿ, ಮಕ್ಕಳ ಮಿತಿ ಮೀರುವ ಖರ್ಚುಗಳಿಗೆ ಕಡಿವಾಣ ಹಾಕುವುದು ಒಳಿತು. ಖಾಸಗಿ ಕಂಪನಿ ನೌಕರರು ನೌಕರಿ ಬದಲಾಯಿಸುವ ವಿಚಾರ ಕೈಬಿಡುವುದು ಲೇಸು. ಹಲವು ವಿಚಾರ ಬಾರಿ ಬಾರಿ ಯೋಚಿಸದೇ ಹೋದಲ್ಲಿ ವ್ಯವಹಾರಿಕ ನಷ್ಟ ಅನುಭವಿಸಬೇಕಾದೀತು. ಮಹಾಲಕ್ಷ್ಮಿಯನ್ನು ಆರಾಧಿಸಿ. ಭಾನು, ಗುರು, ಶುಕ್ರ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2) (ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ವೈದ್ಯಕೀಯ ವೃತ್ತಿಯಲ್ಲಿರುವವರಿಗೆ ಬಿಡುವಿಲ್ಲದ ಕೆಲಸ. ಅಧಿಕ ಶ್ರಮ ಮತ್ತು ದೇಹಾಯಾಸ ಕಾಣಲಿದೆ. ಆದಾಯದ ಕಡೆ ಗಮನ ಹರಿಸದೇ ಕಾಲ ಕಾಲಕ್ಕೆ ವಿಶ್ರಾಂತಿ ತೆಗೆದುಕೊಳ್ಳುವುದು ಉತ್ತಮ. ಸ್ತ್ರೀಯರಿಗೆ ಮನಸ್ಸಿನಲ್ಲಿ ಮೂಡಿರುವ ಸಂಶಯ ದೂರವಾಗಿ ಅನುಕೂಲ ಪರಿಸ್ಥಿತಿ ನಿರ್ಮಾಣವಾಗಲಿದೆ. ಹಿರಿಯರ ಮನೋವ್ಯಾಧಿಗಳಿಗೆ ಭರವಸೆ ಮಾತುಗಳೇ ಮದ್ದು. ಅನ್ಯರೊಂದಿಗೆ ಅದರಲ್ಲೂ ಮಹಿಳೆಯರೊಂದಿಗೆ ಮಾತನಾಡುವಾಗ ಅವರ ವೈಯಕ್ತಿಕ ವಿಚಾರ ಕೇಳಬೇಡಿ. ವೃತ್ತಿಯಲ್ಲಿ ಬರುವ ಗಳಿಕೆಯನ್ನು ಜತನದಿಂದ ಕಾಪಾಡಿಕೊಳ್ಳಿ. ಪಾಲುದಾರರ ಅಭಿಪ್ರಾಯಗಳಿಗೆ ಕೊಡುವ ಮನ್ನಣೆಯಿಂದ ನಿಮ್ಮ ಘನತೆ ಹೆಚ್ಚಲಿದೆ. ಗೋ ಸೇವೆ ಮಾಡಿ. ಮಂಗಳ, ಬುಧ, ಶುಕ್ರ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3) (ರ.ರಿ.ರು.ರೆ.ರೊ.ತ.ತಿ.ತು.ತೆ.)**

ವ್ಯಾಪಾರ ವಹಿವಾಟಿನಲ್ಲಿ ಇಷ್ಟು ಕಾಲ ಆಗುತ್ತಿದ್ದ ನಷ್ಟಕ್ಕೆ ಸ್ಪಷ್ಟ ಕಾರಣ ಗೋಚರಿಸಲಿದೆ. ಕೆದಕಲು ಹೋಗದೇ ಎಚ್ಚರದಿಂದಿರಿ. ಹಿರಿಯರು ವಹಿಸಲಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ಪರೋಪಕಾರದಲ್ಲೇ ಸ್ವ ಹಿತ ಕಾಣುವ ನಿಮ್ಮನ್ನು ಸಮಾಜ ಗೌರವಿಸಲಿದೆ. ವೈಯಕ್ತಿಕ ವಿಚಾರಗಳನ್ನು ಆತ್ಮೀಯರಲ್ಲಿ ಮಾತ್ರ ಹಂಚಿಕೊಳ್ಳಿ. ವಸ್ತ್ರ ವಿನ್ಯಾಸಕರಿಗೆ ಹೆಚ್ಚಿನ ಬೇಡಿಕೆ. ವಿದೇಶದಲ್ಲಿ ಓದಬೇಕೆಂಬ ಮಗನ ಬಯಕೆಗೆ ಮಿತ್ರರಿಂದ ಆರ್ಥಿಕ ನೆರವು. ಆದಾಯದ ಮೂಲದಲ್ಲಿ ಹೆಚ್ಚಳ. ಹಳೆಯ ಸಾಲ ಮರುಪಾವತಿಸಲು ಸಹಾಯವಾಗಲಿದೆ. ಅಜ್ಞಾತ ನದಿ, ತಾಟಕ, ಹಳ್ಳ ಮುಂತಾದ ಸ್ಥಳಗಳಲ್ಲಿ ಸ್ನಾನ ಮಾಡಬೇಡಿ. ಗುರು, ಶುಕ್ರ, ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ) (ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ವೃತ್ತಿಯಲ್ಲಿ ನೀವು ತೋರುವ ಶ್ರದ್ಧೆ, ಶ್ರಮ ಅನುಕೂಲವಾಗಲಿದೆ. ಸಮಾಜಕ್ಕೆ ಉತ್ತಮ ಸಂದೇಶ ಕೊಡುವುದರಲ್ಲಿ ಯಶಸ್ವಿಯಾಗುವಿರಿ. ಯುವತಿಯರು ತಮ್ಮ ಕ್ಷೇತ್ರಗಳಲ್ಲಿ ಹೆಚ್ಚಿನ ಸಾಧನೆ ಮಾಡಲಿದ್ದಾರೆ. ನೀವು ನಿರೀಕ್ಷಿಸಿದ್ದ ಶುಭ ಸಮಾಚಾರವೊಂದು ಕೇಳಿಬರಲಿದೆ. ಸೋದರನ ವಿವಾಹಕ್ಕಿದ್ದ ವಿಘ್ನಗಳು ನಿವಾರಣೆಯಾಗಲಿವೆ. ನಿಮ್ಮ ವಿರೋಧಿಗಳೂ ಕೂಡ ಮೆಚ್ಚುವಂತಹ ಮಹತ್ಕಾರ್ಯವೊಂದು ನೆರವೇರಲಿದೆ. ಯೋಗ್ಯ ನಿರ್ಣಯ ತೆಗೆದುಕೊಳ್ಳುವ ಮೊದಲು ಹಿತೈಷಿಗಳೊಂದಿಗೆ ಚರ್ಚಿಸಿರಿ. ಮಕ್ಕಳು ತಮ್ಮ ತಪ್ಪನ್ನು ತಿದ್ದಿಕೊಂಡು, ಹಿರಿಯರನ್ನು ಗೌರವಿಸುವರು. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಹೂಡಿಕೆ ಬೇಡ. ಮೇಲಾಧಿಕಾರಿಗಳ ಬಗ್ಗೆ ಮಾತನಾಡುವಾಗ ಎಚ್ಚರ. ಭಾನು, ಮಂಗಳ, ಬುಧ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ) (ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಸ್ವಂತ ಉದ್ಯೋಗ ಆರಂಭಿಸುವವರಿಗೆ ಕಾನೂನಾತ್ಮಕ ಅಡಚಣೆಗಳು ದೂರವಾಗಲಿವೆ. ಕೆಲವು ವಿಚಾರಗಳನ್ನು ಧನಾತ್ಮಕವಾಗಿ ತೆಗೆದುಕೊಳ್ಳುವುದನ್ನು ಕಲಿಯಿರಿ. ಚಿಕ್ಕಮಕ್ಕಳಿಗೆ ಶೀತ, ಜ್ವರ, ನೆಗಡಿ ಬಾಧಿಸಲಿದೆ. ಸಮಸ್ಯೆ ಏನೇ ಇದ್ದರೂ ನಿಭಾಯಿಸುವ ಕಲೆ ಕರಗತವಾಗಲಿದೆ. ಉತ್ತಮ ಆದಾಯಕ್ಕಿದ್ದ ಕಂಟಕಗಳು ದೂರವಾಗಲಿವೆ. ಕುಲಗುರು ಅಪ್ಪಣೆಯಂತೆ ಅವರ ಮಾರ್ಗದರ್ಶನದಲ್ಲಿ ಮನೆಯಲ್ಲಿ ಶಾಂತಿಕರ್ಮಗಳು ನಿರ್ವಿಘ್ನವಾಗಿ ನಡೆಯಲಿವೆ. ವ್ಯಾಪಾರದ ಉನ್ನತಿಗಾಗಿ ಶ್ರಮಿಸುವ ನಿಮಗೆ ಪಾಲುದಾರರ ಬೆಂಬಲ ದೊರೆಯಲಿದೆ. ಚಿನ್ನಾಭರಣಗಳ ತಯಾರಕರಿಗೆ ಆದಾಯ ಅಷ್ಟಕಷ್ಟೆ. ಮಗಳಿಗೆ ನೌಕರಿ ದೊರೆಯಲಿದೆ. ಸೋಮ, ಗುರು, ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2) (ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಪ್ರತಿಯೊಂದು ನಿಮ್ಮ ಮೂಗಿನ ನೇರಕ್ಕೆ ಆಗಬೇಕೆಂಬ ಪೂರ್ವಾಗ್ರಹದಿಂದ ಹೊರಬರದಿದ್ದರೆ ಎಲ್ಲವೂ ತಿರುಗುಮುರುಗಾಗಬಹುದು. ತಾಳ್ಮೆಯಿರಲಿ. ಉತ್ತಮ ಗ್ರಹಗಳ ಬಲವು ಕೂಡಿ ಬರಲಿದ್ದು, ಕುಟುಂಬ ಪರಿವಾರ ಸಮೇತ ಹಿರಿಯರೊಂದಿಗೆ ತೀರ್ಥಯಾತ್ರೆ ಮಾಡುವ ಯೋಗ ಬರಲಿದೆ. ನಿರುದ್ಯೋಗಿ ಪದವೀಧರರು ತಾಳ್ಮೆಯಿಂದಿದ್ದಲ್ಲಿ ಉತ್ತಮ ನೌಕರಿ ಪಡೆಯಲು ಸಾಧ್ಯ. ಆರ್ಥಿಕ ಕ್ರೋಢೀಕರಣಕ್ಕೆ ಯತ್ನಿಸುವ ನಿಮಗೆ ಜಯವಾಗಲಿದೆ. ಅನಾವಶ್ಯಕ ದೂರದೂರುಗಳ ಪ್ರಯಾಣ ಬೇಡ. ಅಗತ್ಯಕ್ಕೆ ತಕ್ಕಷ್ಟು ಖರ್ಚು ಮಾಡುವುದು ಒಳಿತು. ಮತ್ತೊಬ್ಬರ ವಾಹನ ಚಾಲಿಸಲು ಹೋದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ. ಬುಧ, ಶುಕ್ರ, ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3) (ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ನಿಮ್ಮ ಪಾಡಿಗೆ ನೀವಿದ್ದರೂ ಬಂಧುಗಳ ಕಿರುಕುಳದಿಂದ ಮನಸ್ಸಿಗೆ ಬೇಸರ. ಹಳೇ ಮನೆಯನ್ನು ನವೀಕರಿಸಲು ಹಣಕಾಸಿನ ತೊಂದರೆ. ವಿದ್ಯಾರ್ಥಿಗಳು ಪ್ರಗತಿಪರ ಚಿಂತನೆಯಲ್ಲಿ ಯಶಸ್ವಿಯಾಗುವರು. ಅಂದುಕೊಂಡ ಕಾರ್ಯಗಳು ಸುಸೂತ್ರವಾಗಿ ನೆರವೇರಲಿವೆ. ಸರ್ಕಾರಿ ನೌಕರರಿಗೆ ಮೇಲಾಧಿಕಾರಿಗಳ ಕಿರುಕುಳ ತಪ್ಪಿದ್ದಲ್ಲ. ನಿಮ್ಮ ತಟಸ್ಥ ನೀತಿಯಿಂದ ಕುಟುಂಬದ ಹಲವು ಸಮಸ್ಯೆಗಳು ಪರಿಹಾರವಾಗಲಿವೆ. ರಾಜಕಾರಣಿಗಳಿಂದ ದೂರವಿರಿ. ಮರೆತು ಹೋಗಿದ್ದ ಸಂಗತಿ ಮತ್ತೆ ನಿಮ್ಮ ಕೊರಳಿಗೆ ಸುತ್ತಿಕೊಂಡು ತಲೆನೋವಾಗಿ ಪರಿಣಮಿಸಲಿದೆ. ನಿಗದಿತ ಕಾರ್ಯಗಳಿಂದ ಧನಾಗಮ. ಹಳೇ ಕಾಯಿಲೆಗಳು ಮರುಕಳಿಸದಂತೆ ಎಚ್ಚರ ವಹಿಸಿ. ಭಾನು, ಗುರು, ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ) (ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಹೇಳಲಾರದ ವೇದನೆ ಹಂಚಿಕೊಳ್ಳಲು ಸಂಗಾತಿ ಸಿಗಲಿದ್ದಾರೆ. ಉದ್ವೇಗಕ್ಕೆ ಒಳಗಾಗದೇ ಅಂತರಂಗವನ್ನು ಅವರಲ್ಲಿ ನಿವೇದಿಸಿಕೊಳ್ಳಿ. ವಿದೇಶದಿಂದ ಬಂಧುಗಳ ಆಗಮನದಿಂದ ಹಬ್ಬದ ವಾತಾವರಣ ಮೂಡಲಿದೆ. ಕಷ್ಟದಲ್ಲಿರುವವರಿಗೆ ನೀವಾಡಲಿರುವ ಸಾಂತ್ವನದ ಮಾತು ಅವರ ಆತ್ಮವಿಶ್ವಾಸವನ್ನು ಹೆಚ್ಚಸಲಿದೆ. ಉದ್ಯೋಗ ರಂಗದಲ್ಲಿ ಚೇತರಿಕೆ ಕಂಡು ಬರಲಿದೆ. ಆರ್ಥಿಕ ಸಂಕಷ್ಟ ಎದುರಿಸಲು ಸಿದ್ಧರಾಗಿರಿ. ಸಾಂಸಾರಿಕ ಸೌಖ್ಯಕ್ಕಾಗಿ ಹೊಸ ಮಾರ್ಗೋಪಾಯ ಹುಡುಕುವಿರಿ. ಪ್ರೇಮಿಗಳ ಹುಚ್ಚಾಟಕ್ಕೊಂದು ಕಡಿವಾಣ ಹಾಕದೇ ಹೋದಲ್ಲಿ ಪರಿಣಾಮ ಘೋರವಾದೀತು. ಹಿರಿಯರು ತಮ್ಮ ಅನುಭವವನ್ನು ಕಿರಿಯರಿಗೆ ಧಾರೆ ಎರೆಯಲು ಸಕಾಲ. ಗುರುಗಳ ಸೇವೆ ಮಾಡಿ. ಸೋಮ, ಮಂಗಳ, ಗುರು ಶುಭ ದಿನಗಳು.

# ಎದೆಯುಬ್ಬಿಸಿ ಹೇಳಿ, ನಾನು ಕೃಷಿಕ ಎಂದು

## ನಾಟಕೋತ್ಸವ ಕಾರ್ಯಕ್ರಮದಲ್ಲಿ ರೈತರಿಗೆ ಕೃಷಿ ಸಚಿವ ಬಿ.ಸಿ. ಪಾಟೀಲ್ ಕರೆ



ಸಾಣೇಹಳ್ಳಿ, ನ.6- ರೈತ ಎದೆಯುಬ್ಬಿಸಿ ನಾನು ಕೃಷಿಕ ಎಂದು ಹೇಳಬೇಕು. ಅನ್ನ ಕೊಡುವವ ಒಬ್ಬನೇ ಒಬ್ಬ ಅದು ರೈತ. ರೈತರಲ್ಲಿ ಭರವಸೆ ತುಂಬಲು 'ರೈತರೊಂದಿಗೆ ಒಂದು ದಿನ' ಎನ್ನುವ ಕಾರ್ಯಕ್ರಮವನ್ನು ಸಚಿವನಾದ ಮೇಲೆ ಹಾಕಿಕೊಂಡಿದ್ದೇನೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ಇಲ್ಲಿನ ಶ್ರೀ ಶಿವಕುಮಾರ ಕಲಾಸಂಘ ಆಯೋಜಿಸಿದ್ದ ನಾಟಕೋತ್ಸವ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ಭೂಮಿಗೆ ವಿಷವುಣ್ಣಿಸಿ ಅಮೃತ ಬಯಸುವುದು ಸಾಧ್ಯವಿಲ್ಲ. ಹಾಗಾಗಿ ಸಾವಯವ ಕೃಷಿಯನ್ನು ಕೈಗೊಳ್ಳುವುದರ ಮೂಲಕ ಭೂಮಿಯನ್ನು ಮತ್ತೆ ಅಮೃತ ನೀಡುವ ತಾಣವನ್ನಾಗಿಸಬೇಕಾಗಿದೆ ಎಂದು ಹೇಳಿದರು.

ಆಹಾರ ಸಂಸ್ಕರಣೆ ಮಾಡಿ ನಂತರ ಮಾರಿದರೆ ರೈತರಿಗೆ ಹೆಚ್ಚಿನ, ಸರಿಯಾದ ಬೆಲೆ ದೊರೆಯುವುದು. ತರೀಕೆರೆ ತಾಲ್ಲೂಕು ಲಿಂಗದಹಳ್ಳಿಯಲ್ಲಿ ಕೋಲ್ಡ್ ಸ್ಟೋರ್ ಆರಂಭಿಸಿದ್ದೇವೆ. ಬಿಸಿಯೂಟದಲ್ಲಿ ಸಿರಿಧಾನ್ಯ ನೀಡುವಂತೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸುತ್ತೇನೆ ಎಂದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಸಾಣೇಹಳ್ಳಿ ಶ್ರೀ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಶಿವಕುಮಾರ ಶ್ರೀಗಳು ಪಟ್ಟಕ್ಕೆ ಬಂದಾಗ ಸಮಾಜ ಒಡೆದ ಮಡಿಕೆಯಂತಿತ್ತು. ಅದನ್ನು ಒಂದುಗೂಡಿಸಿ ಅದ್ಭುತವಾಗಿ ಸಮಾಜ ಕಟ್ಟಿದ್ದಾಗಿ ಹೇಳಿದರು.

ಬಸವಣ್ಣನವರನ್ನು ನಾವಾರೂ ನೋಡಿಲ್ಲ; ಆದರೆ ಶಿವಕುಮಾರ ಶ್ರೀಗಳವರನ್ನು ನಾವೆಲ್ಲರೂ ಬಲ್ಲೆವು. ನಾವು ಸ್ವಾಮಿಗಳಾಗಿ 45 ವರ್ಷಗಳಾಗಿವೆ. ಇಲ್ಲಿ ಏನಾದರೂ ಕೆಲಸ ಕಾರ್ಯಗಳು ಆಗಿದ್ದರೆ ಅದು ನಮ್ಮಿಂದ ಅಲ್ಲ, ಶಿವಕುಮಾರ ಶ್ರೀಗಳಿಂದಾಗಿ ಮಾತ್ರ ಎಂದರು.

ಮನೆಯಲ್ಲಿನ ಹಿರಿಯರು ಕಿರಿಯರನ್ನು ಪ್ರೋತ್ಸಾಹಿಸಿದರೆ ಮನೆತನ ಅದ್ಭುತ ಪ್ರಗತಿ ಸಾಧಿಸಲು ಸಾಧ್ಯ. ಯಾರೂ ದಡ್ಡರಲ್ಲ. ಅವರಿಗೆ ಸರಿಯಾದ ಪ್ರೇರಣೆ, ಸ್ಫೂರ್ತಿ ತುಂಬಿದರೆ ಅವನೂ ಮೇಲೆ ಬರಬಲ್ಲ. ಇದಕ್ಕೆ ನಾವೇ ಉದಾಹರಣೆ. ನಾವು ಫೇಲಾಗುವುದರಲ್ಲಿ ದಾಖಲೆ ಬರೆದಿದ್ದೇವೆ. ಆದರೆ, ಹಿರಿಯ ಗುರುಗಳು ಪ್ರೋತ್ಸಾಹಿಸಿದ್ದರ ಫಲವಾಗಿ ಬಿಎ ಮತ್ತು ಎಂಎಗಳಲ್ಲಿ ರ್‍ಯಾಂಕ್ ಪಡೆಯಲು ಸಾಧ್ಯವಾಯಿತು ಎಂದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಚಿಗರಹಳ್ಳಿ ಜಗದ್ಗುರು ಶ್ರೀ ಮರುಳಶಂಕರದೇವ ಗುರುಪೀಠದ ಶ್ರೀ ಬಸವ ಕಬೀರ ಸ್ವಾಮೀಜಿ ಮಾತನಾಡಿ, ಬಸವಣ್ಣನವರು ಕೃಷಿಕರನ್ನೇ ಶ್ರೇಷ್ಠ ಎಂದು ಗೌರವಿಸಿದ್ದರು. ಪೂಜ್ಯರ ಮತ್ತೆ ಕಲ್ಯಾಣ ಅಭಿಯಾನ ಅಪೂರ್ವವಾದುದು. ಕೇವಲ ಸಾಣೇಹಳ್ಳಿಯನ್ನಷ್ಟೇ ಅಲ್ಲ ಇಡೀ ರಾಜ್ಯವನ್ನು ಕಲ್ಯಾಣ ಮಾಡುವ ಅವರ ಪ್ರಯತ್ನ ಶ್ಲಾಘನೀಯ ಎಂದರು.

ಚಿತ್ರದುರ್ಗದ ಶ್ರೀ ಬಸವ ಮಾದಾರ ಚೆನ್ನಯ್ಯ ಸ್ವಾಮೀಜಿ ಮಾತನಾಡಿ, ಸಿರಿಧಾನ್ಯಗಳು ಹಿಂದೆ ಬಡವರ ಧಾನ್ಯಗಳಾಗಿದ್ದವು. ಆದರೆ ಇಂದು ಎಲ್ಲರೂ ಬಳಸುವಂತಾಗಿರುವುದು ಅವುಗಳ ಮಹತ್ವ ತಿಳಿಸುತ್ತದೆ. ಸಾವಯವ ಕೃಷಿಯಿಂದ ವಿಷಮುಕ್ತ ಆಹಾರವನ್ನು ಉತ್ಪಾದಿಸಲು ಸಾಧ್ಯ. ಕೃಷಿ ಚಟುವಟಿಕೆಗಳಿಂದ ಜನರು ಹೊರ ಬರುತ್ತಿರುವುದು ಆತಂಕಕಾರಿ ಸಂಗತಿ ಎಂದರು.

ವಿಷಯ ಮಾಲಿಕೆಯಲ್ಲಿ 'ಸಾವಯವ ಕೃಷಿ' ಕುರಿತು ರಾಜ್ಯಮಟ್ಟದ ಸಾವಯವ ಕೃಷಿ ಉನ್ನತಾಧಿಕಾರ ಸಮಿತಿಯ ಅಧ್ಯಕ್ಷ ಆನಂದ ಮಾತನಾಡಿ, ರೈತನ ಮನೆಯಲ್ಲಿ ರೈತ ಹುಟ್ಟುವನೇ? ವಿದ್ಯಾವಂತರನ್ನು ಸೃಷ್ಟಿಸುವ ಬೇಕಾದಷ್ಟು ವಿಶ್ವವಿದ್ಯಾಲಯಗಳು ಸಿಗಬಹುದು. ಆದರೆ ರೈತರನ್ನು ಸೃಷ್ಟಿಸುವುದೆಲ್ಲಿ ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಕಷ್ಟವಾಗಿದೆ.

ದೇವರು ನಮಗೆ ವಿಷವಿಲ್ಲದ ಆಹಾರದ ಎಡೆಯನ್ನು ಇಡಿ ಎಂದು ಕೇಳಿದರೆ ಎಲ್ಲಿಗೆ ಹೋಗಬೇಕು ನಾವು? ಸಾವಯವ ಕೃಷಿಕನಿಗೆ ಯಾವುದೇ ಪದ್ಮಶ್ರೀ, ಪದ್ಮವಿಭೂಷಣ ಬೇಕಿಲ್ಲ. ಪೂಜ್ಯರ ಸಾರಥ್ಯದಲ್ಲಿ ಸಾವಯವ ಕೃಷಿಯ ಆಂದೋಲನ ನಡೆಯಬೇಕು ಎಂದರು.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ಕರಿಸಿದ್ದಪ್ಪ, ಚಿತ್ರದುರ್ಗದ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ, ಚಿತ್ರದುರ್ಗದ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಡಾ. ಪಿ.ರಮೇಶ್ ಕುಮಾರ್, ಚಲನಚಿತ್ರ ನಿರ್ದೇಶಕ ನಂದಕಿಶೋರ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ದಾವಣಗೆರೆ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಡಿ.ಸಿ. ಪಸನ್ನ ಮತ್ತು ಡಿ.ಜಿ. ಪ್ರಕಾಶ್ ಅವರುಗಳನ್ನು ಅಭಿನಂದಿಸಲಾಯಿತು.

# ಹರಿಹರ: ಮಾ.22 ರಿಂದ ಊರಮ್ಮ ದೇವಿ ಹಬ್ಬ





**(1ನೇ ಪುಟದಿಂದ)** ಚರ್ಚಿಸಲಾಗುವುದು. ಯಾವುದೇ ಅಡೆತಡೆಗಳು ಬರದಂತೆ ಎರಡೂ ಗ್ರಾಮದವರು ಕೂಡಿ ಹಬ್ಬವನ್ನು ಸಂಭ್ರಮದಿಂದ ಆಚರಣೆ ಮಾಡೋಣ ಎಂದರಲ್ಲದೆ, ಮುಂದಿನ ವಾರದಲ್ಲಿ ಸಭೆ ನಡೆಸಿ, ಉತ್ಸವ ಸಮಿತಿಗೆ ಆಯ್ಕೆ ಮಾಡಲಾಗುವುದು ಎಂದರು.

2019 ರಲ್ಲಿ ನಡೆದ ಉತ್ಸವದ ಜಮಾ ಖರ್ಚಿನ ವಿವರನ್ನು ಕೆ.ಬಿ. ರಾಜಶೇಖರ್ ಮಂಡಿಸಿದರು. ಕಳೆದ ಹಬ್ಬದ ಸಮಯದಲ್ಲಿ 47,82,073 ರೂಪಾಯಿ ಸಂಗ್ರಹವಾಗಿದ್ದು, ಅದರಲ್ಲಿ 47,82,073 ಖರ್ಚು ಮಾಡಲಾಗಿದ್ದು ಇದರಲ್ಲಿ ಶ್ರೀ ಸಣ್ಣ ಅಮ್ಮನವರಿಗೆ 15,89,073 ವೆಚ್ಚದ 2 ಬಂಗಾರದ ಕಿರೀಟ ಮಾಡಿಸಲಾಗಿದೆ. ಉಳಿದ 3000 ಸಾವಿರ ರುಪಾಯಿ ಬ್ಯಾಂಕಿನಲ್ಲಿ ಉಳಿತಾಯ ಖಾತೆಯಲ್ಲಿ ಜಮಾ ಮಾಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ನಾರಾಯಣ ಜೋಯಿಸರು ಮತ್ತು ಹರಿಶಂಕರ್ ಜೋಯಿಸರು, ಶಾನುಭೋಗ ಹರಿಶಂಕರ್, ಬಣಕಾರ ಸಿದ್ದಪ್ಪ, ಮಾಜಿ ಉತ್ಸವ ಸಮಿತಿಯ ಅಧ್ಯಕ್ಷ ಪರಶುರಾಮ್ ಕಾಟ್ವೆ, ಕಾರ್ಯದರ್ಶಿ ಗೌಡ್ರು ಮಲ್ಲೇಶಪ್ಪ, ಖಜಾಂಚಿ ಕೆ. ಷಣ್ಮುಖ, ಗುತ್ಯಪ್ಪ, ಸಹ ಕಾರ್ಯದರ್ಶಿ ಇಂಗಳಗುಂದಿ ಹನುಮಂತಪ್ಪ, ಕೆ. ಜಡಿಯಪ್ಪ, ವೈ.ಎನ್. ಮಹೇಶ್, ಕೆ.ಬಿ. ರಾಜಶೇಖರ್, ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ಗುತ್ತೂರು ಜಂಬಣ್ಣ, ತಾ.ಪಂ. ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಗೌಡ್ರು ಪುಟ್ಟಪ್ಪ, ವಕೀಲ ನಾಗರಾಜ್, ಮಾಜಿ ನಗರಸಭೆ ಅಧ್ಯಕ್ಷ ಸುರೇಶ್, ನಿಖಿಲ್ ಕೊಂಡಜ್ಜಿ, ನಂದಿಗಾವಿ ಶ್ರೀನಿವಾಸ್, ಮುದೇಗೌಡ್ರು ಹನುಮಂತಪ್ಪ, ಅಂಗಡಿ ಮಹಾದೇವಪ್ಪ, ಪೂಜಾರ್ ಈರಣ್ಣ ಉಪಸ್ಥಿತರಿದ್ದರು.

ಬೆಣ್ಣೆ ರೇವಣಸಿದ್ದಪ್ಪ, ಕರಿಬಸಪ್ಪ ಕಂಚಿಕೇರಿ, ಸಿ.ಎನ್. ಹುಲುಗೇಶ್, ಅಣ್ಣಪ್ಪ ಪೈ, ಗೌಡ್ರು ಬಸವರಾಜಪ್ಪ, ಹೆಚ್. ನಿಜಗುಣ, ಸುರೇಶ್ ಚಂದಾಪೂರ್, ಚೂರಿ ಜಗದೀಶ್, ಶಿವಪ್ರಕಾಶ್ ಶಾಸ್ತ್ರಿ, ರೇವಣಪ್ಪ ದ್ಯಾವನೇಕರ್, ಹಂಚಿನ ನಾಗಪ್ಪ, ಎಂ.ಆರ್. ಚಂದ್ರಶೇಖರ್, ಸತ್ಯನಾರಾಯಣ ನಂದಿಗಾವಿ, ಶ್ರೀನಿವಾಸ್ ಚಂದಾಪೂರ್, ಪತ್ರಕರ್ತ ಚಿದಾನಂದ ಕಂಚಿಕೇರಿ, ಬೆಣ್ಣೆ ಸಿದ್ದಪ್ಪ, ಕೆಂಚಪ್ಪ, ಪ್ರಭು ಮುದೇಗೌಡ್ರು, ನಾಮಿನಿ ಮಾಜಿ ಸದಸ್ಯ ವಸಂತ್ ಕುಮಾರ್, ಕೆ.ಟಿ. ಸುರೇಶ್, ಪೂಜಾರ್ ಹೇಮಣ್ಣ, ಚೌಗಲೆ ಬಾಳು ಲಕ್ಷ್ಮಣ, ಮಂಜುನಾಥ್ ಚೂರಿ, ಗಜೇಂದ್ರ ಬೇಲೂರು, ಮಹಾಂತೇಶ್, ಚಂದನ್ ಮೂರ್ಕಲ್, ತುಳಜಪ್ಪ ಭೂತೆ, ಕಿರಣ್ ಭೂತೆ, ಅಶೋಕ ಭೂತೆ, ಗಣಪತಿ, ನಿಜಗುಣ ಹಳ್ಳದಕೇರಿ, ಮಜ್ಜಿಗೆ ಪಾಲಾಕ್ಷಪ್ಪ, ಮಜ್ಜಿಗೆ ಚಂದ್ರಪ್ಪ, ಬಸವರಾಜಪ್ಪ ಹರಪನಹಳ್ಳಿ, ತಿಪ್ಪೇಶ್, ಬಸವರಾಜಪ್ಪ, ವೆಂಕಟೇಶ್ ತೇಲ್ಕರ್, ದಾವಣಗೆರೆ ಶಿವಣ್ಣ, ಹಾವನೂರು ಈರಣ್ಣ, ಅರ್ಚಕರಾದ ಮಾನಪ್ಪ ಆಚಾರ್, ವೀರೇಶ್ ಆಚಾರ್, ಜನಾರ್ದನ್ ಆಚಾರ್, ನಾಗರಾಜ್ ಆಚಾರ್ ಇನ್ನಿತರರಿದ್ದರು.

ಇದೇ ವೇಳೆ ಶಾನುಭೋಗ ವೆಂಕಟೇಶ್ ಮತ್ತು ನಟ ಪುನೀತ್ ರಾಜ್‌ಕುಮಾರ್ ಅವರ ನಿಧನಕ್ಕೆ ಮೌನಾಚರಣೆ ನಡೆಸಲಾಯಿತು.

# ಸಂಭ್ರಮದ ದೀಪಾವಳಿ

**(1ನೇ ಪುಟದಿಂದ)** ವರ್ತಕರು ಸಂಕಷ್ಟಕ್ಕೆ ಸಿಲುಕಿದ್ದರು. ಸುಮಾರು 4-5 ಲಕ್ಷ ರೂ.ಗಳ ನಷ್ಟವೂ ಆಗಿತ್ತು ಎಂದವರು ಹೇಳಿದ್ದಾರೆ.

**ಹಸಿರು ಪಟಾಕಿ :** ಈ ವರ್ಷ ಪಟಾಕಿಗಳ ಉತ್ಪಾದನೆ ಮಾಡುವ ತಾಣಗಳಲ್ಲೇ ಹಸಿರು ಪಟಾಕಿಗಳ ಮಾನದಂಡ ಜಾರಿಗೆ ತರಲಾಗಿದೆ. ನಾವೂ ಸಹ ಪಟಾಕಿಗಳ ಪರಿ ಶೀಲನೆ ನಡೆಸಿದ್ದು, ಎಲ್ಲವೂ ನಿಗ ದಿತ ಮಾನದಂಡದಲ್ಲೇ ಇದ್ದವು. ಕಳೆದ ಒಂದು ವಾರದಿಂದ ನಿರಂ ತರವಾಗಿ ವಾತಾವರಣದ ಮೇಲೆ ನಿಗಾ ಇಟ್ಟಿದ್ದು, ಎಲ್ಲ ಮಾನ ದಂಡಗಳಲ್ಲೂ ವಾತಾವರಣ ಉತ್ತಮವಾಗಿದೆ ಎಂದು ಪರಮೇಶ್ವರಪ್ಪ ಹೇಳಿದ್ದಾರೆ.

**ಮಾಲಿನ್ಯ ಕಡಿಮೆ :** ದೊಡ್ಡ ನಗರಗಳ ಜೊತೆ ಹೋಲಿಕೆ ಮಾಡಿದರೆ ದಾವಣಗೆರೆಯಲ್ಲಿ ಪರಿಸರ ಮಾಲಿನ್ಯ ಕಡಿಮೆಯೇ ಇದೆ. ನಗರದಲ್ಲಿ ಸಿಮೆಂಟ್ ರಸ್ತೆಗಳು ನಿರ್ಮಾಣಗೊಂಡಿರು ವುದರಿಂದ ದೂಳು ಕಡಿಮೆ ಯಾಗಿದೆ. ಪ್ರಸಕ್ತ ನ ಡೆ ಯು ತ್ತಿ ರು ವ ಕಾಮಗಾರಿಗಳು ಪೂರ್ಣಗೊಂಡರೆ ಮಾಲಿನ್ಯ ಇನ್ನೂ ಕಡಿಮೆಯಾಗಲಿದೆ ಎಂದು ಮಹೇಶ್ವರಪ್ಪ ಹೇಳಿದ್ದಾರೆ.

# ಹರಿಹರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ

**(1ನೇ ಪುಟದಿಂದ)** ಭೇಟಿ ನೀಡಿದ್ದ ಸ್ಥಳಗಳಲ್ಲಿ ಹರಿಹರ ಕೂಡ ಒಂದಾಗಿದ್ದು, ಭಾರತ ಸರ್ಕಾರದ ನಿರ್ದೇಶನ, ರಾಜ್ಯದ ಮುಖ್ಯ ಕಾರ್ಯದರ್ಶಿಯವರ ನಿರ್ದೇಶನ ಹಾಗೂ ಭಾರತ ಸರ್ಕಾರದ ಸಂಸ್ಕೃತಿ ಮಂತ್ರಾಲಯ, ಧಾರ್ಮಿಕ ದತ್ತಿ ನಿರ್ದೇಶನಾಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸೂಚನೆಯಂತೆ ಇಂದು ದೇವಾಲಯದ ಆವರಣದಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯುತ್ತಿರುವುದಾಗಿ ಹೇಳಿದರು. ಕಾರ್ಯಕ್ರಮದಲ್ಲಿ ಶಾಸಕ ಎಸ್. ರಾಮಪ್ಪ, ಶಾಸಕ ಎಸ್. ಎ. ರವೀಂದ್ರನಾಥ್, ಪ್ರೊ.ಲಿಂಗಣ್ಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಪುನೀತ್ ರಾಜ್‌ಕುಮಾರ್ ಕನ್ನಡ ಆಸ್ತಿ : ಬೊಮ್ಮಾಯಿ



ಬೆಂಗಳೂರು, ನ. 6- ಪುನೀತ್ ರಾಜ್ ಕುಮಾರ್ ಕನ್ನಡದ ಆಸ್ತಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



**ಡಾ. ರಾಜ್ ಕುಟುಂಬಕ್ಕೆ ಮುಖ್ಯಮಂತ್ರಿಗಳ ಸಾಂತ್ವನ**

ದಿವಂಗತ ನಟ ಪುನೀತ್ ರಾಜ್ ಕುಮಾರ್ ಅವರ ನಿವಾಸಕ್ಕೆ ಇಂದು ಭೇಟಿ ನೀಡಿದ ನಂತರ ತಮ್ಮನ್ನು ಸಂಪರ್ಕಿಸಿದ ಮಾಧ್ಯಮದವರಿಗೆ ಅವರು ಮಾತನಾಡಿದರು.

ಪುನೀತ್ ರಾಜ್ ಕುಮಾರ್ ಅವರನ್ನು ಕಳೆದುಕೊಂಡು ಎಂಟು ದಿನಗಳಾದ ಹಿನ್ನೆಲೆಯಲ್ಲಿ ಕುಟುಂಬದವರನ್ನು ಭೇಟಿ ಮಾಡಿ ಸಾಂತ್ವನ ಹೇಳಲಾ ಗಿದೆ. ಪುನೀತ್ ಇಲ್ಲವಾಗಿರುವುದು ಕುಟುಂಬದ ಸದಸ್ಯರೊಬ್ಬರನ್ನು ಕಳೆದು ಕೊಂಡಂತಾಗಿದೆ. ಇಡೀ ಕರ್ನಾಟಕದ ಜನತೆ ಕುಟುಂಬದೊಂದಿಗೆ ಇದೆ ಎಂದು ಧೈರ್ಯ ಹೇಳಲಾಗಿದೆ ಎಂದರು.

ಅಪ್ಪು ಅಂತ್ಯಕ್ರಿಯೆಯನ್ನು ಅತ್ಯಂತ ಪ್ರೀತಿ ಮತ್ತು ಗೌರವಗಳಿಂದ, ಆತ್ಮೀಯತೆಯಿಂದ ಹಾಗೂ ಭಾವನಾತ್ಮಕವಾಗಿ ನಡೆಸಿಕೊಟ್ಟಿರುವುದಕ್ಕಾಗಿ ಕುಟುಂಬದವರು ಸರ್ಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು. ಹಾಗೆ ನಡೆದುಕೊಳ್ಳುವುದು ಸರ್ಕಾರದ ಕರ್ತವ್ಯವಾಗಿದ್ದು, ಈ ಕರ್ತವ್ಯವನ್ನು ಪ್ರೀತಿ, ವಿಶ್ವಾಸದಿಂದ ನಡೆಸಿಕೊಡಲಾಗಿದೆ ಎಂದು ಹೇಳಿರುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ಕುಟುಂಬದವರು ಮುಂದೆ ಜರುಗಬೇಕಾದ ಕಾರ್ಯಕ್ರಮಗಳ ಬಗ್ಗೆ ತೀರ್ಮಾನ ಮಾಡುತ್ತಿದ್ದಾರೆ. ಅಪ್ಪು ಅವರಿಗಿದ್ದ ಜನ ಮನ್ನಣೆ, ಗೌರವಗಳಿಗೆ ತಕ್ಕ ಹಾಗೆ ಮುಂದಿನ ಕಾರ್ಯಗಳನ್ನು ನೆರವೇರಿಸಲಾಗುವುದು ಎಂದ ಮುಖ್ಯಮಂತ್ರಿಗಳು, ಅಪಾರ ಜನಸ್ತೋಮ ಪುನೀತ್ ಸಮಾಧಿ ಬಳಿ ದರ್ಶನವನ್ನು ಕಂಠೀರವ ಸ್ಟುಡಿಯೋದಲ್ಲಿ ಇಂದಿಗೂ ಪಡೆಯುತ್ತಿದ್ದಾರೆ. ಕುಟುಂಬದ ಸದಸ್ಯರಿಗೆ ಅಗತ್ಯವಿರುವ ಎಲ್ಲಾ ಸಹಕಾರವನ್ನು ತಾವು ನೀಡುವುದಾಗಿ ಅವರು ಭರವಸೆ ನೀಡಿದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಇದೇ ದಿನಾಂಕ 16 ರಂದು ಹಮ್ಮಿಕೊಂಡಿರುವ ಕಾರ್ಯಕ್ರಮಕ್ಕೆ ಅಗತ್ಯವಿರುವ ಭದ್ರತೆ ನೀಡಲಾಗುವುದು ಎಂದರು.

ದಿ. ನಟ ಪುನೀತ್ ಅವರ ಹೆಸರನ್ನು ಪದ್ಮಶ್ರೀ ಪ್ರಶಸ್ತಿಗೆ ಶಿಫಾರಸ್ಸು ಮಾಡಬೇಕೆಂಬ ಅಭಿಮಾನಿಗಳ ಅಭಿಲಾಷೆಯಂತೆ ಕ್ರಮ ವಹಿಸಲಾಗುವುದು ಎಂದ ಮುಖ್ಯಮಂತ್ರಿಗಳು, ಸದ್ಯ ಪುನೀತ್ ಅವರ ಕುಟುಂಬ ದುಃಖದಲ್ಲಿದ್ದು, ನವೆಂಬರ್ 16 ರ ಕಾರ್ಯಕ್ರಮ ಮುಗಿದ ನಂತರ ಈ ಬಗ್ಗೆ ಚರ್ಚಿಸಲಾಗುವುದು. ಅಪ್ಪು ಅವರಿಗೆ ಪದ್ಮಶ್ರೀ ನೀಡುವ ವಿಚಾರ ಸರ್ವಸಮ್ಮತವಾಗಿದೆ ಎಂದು ಸ್ಪಷ್ಟಪಡಿಸಿದರು.

# ಹೆಚ್ಚಿದ ಅಕಾಲಿಕ ಮಳೆ

**(1ನೇ ಪುಟದಿಂದ)** ಅಂತರರಾಷ್ಟ್ರೀಯ ನಗರವಾಗಿದ್ದು, ನಗರದಲ್ಲಿ ಮಳೆಯಿಂದಾಗುವ ಹಾನಿಯನ್ನು ತಡೆಗಟ್ಟಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಈ ಬಾರಿ ಮಳೆಯ ಕಾರಣ ಎಲ್ಲೆಲ್ಲಿ ಹಾನಿಯಾಗಿದೆ ಎನ್ನುವ ಬಗ್ಗೆ ಹಾಗೂ ಕೈಗೊಂಡಿರುವ ಕ್ರಮ, ಮುಂದೆ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡ ಮುಖ್ಯಮಂತ್ರಿಗಳು, ಚರಂಡಿಯಿಂದ ನೀರು ಹೊರ ಬರುತ್ತದೆ ಎಂದರೆ, ಅದನ್ನು ಸರಿಪಡಿಸುವುದು ಅಧಿಕಾರಿಗಳ ಜವಾ ಬ್ದಾರಿ. ಸಮಸ್ಯೆಯನ್ನು ಅರ್ಥಮಾಡಿ ಕೊಂಡು ಪರಿಹಾರವನ್ನು ಕಂಡುಕೊಳ್ಳಬೇಕು ಎಂದರು. ತೀವ್ರ ಪ್ರವಾಹವಾಗುವ ಪ್ರದೇಶಗಳನ್ನು ಹಾಗೂ ಮುಖ್ಯ ಚರಂಡಿಗಳಲ್ಲಿ ಸಮಸ್ಯೆ ಇರುವಲ್ಲೆಲ್ಲಾ ಗುರುತಿಸಿ ಸರಿಪಡಿಸಬೇಕು. ಚರಂಡಿಗಳ ನಿರ್ಮಾಣ ಮಾಡುವಾಗ ಅವುಗಳ ವಿನ್ಯಾಸವನ್ನು ಸೂಕ್ತವಾಗಿ ಮಾಡಬೇಕು. ರಾಜಕಾಲುವೆಗಳ ಸುತ್ತಲೂ ಅಕ್ರಮ ಬಡಾವಣೆಗಳು ಬಂದಿವೆ. ಪ್ರಾರಂಭದಲ್ಲಿಯೇ ಅಕ್ರಮವನ್ನು ತಡೆಯಬೇಕಿತ್ತು. ಆದರೆ ಆಡಳಿತಾತ್ಮಕವಾಗಿ ಕ್ರಮಗಳನ್ನು ಕೈಗೊಳ್ಳಲೇಬೇಕು ಎಂದು ಸೂಚಿಸಿದರು.

ತೀವ್ರವಾಗಿ ಪ್ರವಾಹ ಉಂಟಾಗುವ ಪ್ರದೇಶಗಳಲ್ಲಿಯಾದರೂ ತಕ್ಷಣವೇ ವೈಜ್ಞಾನಿಕ ಕ್ರಮ ಕೈಗೊಳ್ಳಬೇಕು. ನಗರದಲ್ಲಿ ಪ್ರತಿ 50 ಮೀಟರ್‌ಗಳಿಗೆ ರೀಚಾರ್ಜಿಂಗ್ ಪಿಟ್ಸ್ ಅಗತ್ಯವಿದೆ. ಪ್ರಾಯೋಗಿಕವಾಗಿ ಈ ಕಾರ್ಯವನ್ನು ಕೈಗೊಳ್ಳುವಂತೆ ಸೂಚಿಸಿದರು. ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಮೊದಲು ಕಾರ್ಯಗತಗೊಳಿಸಲು ಸೂಚನೆ ನೀಡಿದರು.

# ರಾತ್ರಿ ಕರ್ಫ್ಯೂ ರದ್ದು

**(1ನೇ ಪುಟದಿಂದ)** ಕಾರ್ಯಕಾರಿ ಸಮಿತಿ ಅಧ್ಯಕ್ಷ ಕರ್ಫ್ಯೂ ಹಿಂಪಡೆಯುವ ಆದೇಶವನ್ನು ಹೊರಡಿಸಿದ್ದಾರೆ. ಕುದುರೆ ರೇಸ್‌ಗಳ ಪಂದ್ಯದಲ್ಲಿ ಅದರ ಪಾಲಕರು ಭಾಗವಹಿಸಬಹುದು. ಆದರೆ ಅವರೆಲ್ಲರೂ ಕೋವಿಡ್ ಎರಡೂ ಲಸಿಕೆ ಪಡೆದಿರಬೇಕು. ಸೋಂಕು ಇಳಿಕೆಯಾದ ನಂತರ ಎಲ್ಲ ಆರ್ಥಿಕ ಚಟುವಟಿಕೆಗಳಿಗೆ ಅನುಮತಿ ನೀಡಿದ್ದರೂ, ರಾತ್ರಿ ಕರ್ಫ್ಯೂ ಮಾತ್ರ ಮುಂದುವರೆಸಲಾಗಿತ್ತು. ಇದೀಗ ಈ ಆದೇಶವನ್ನು ಸರ್ಕಾರ ಹಿಂದಕ್ಕೆ ಪಡೆದಿದೆ.


## ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,

**ಮಂಡಿಪೇಟೆ, ದಾವಣಗೆರೆ.**

**2020-2021ನೇ ಸಾಲಿನ 24ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು**

**ದಿನಾಂಕ : 14.11.2021ನೇ ಭಾನುವಾರ ಬೆಳಿಗ್ಗೆ 11.25ಕ್ಕೆ ವಿಡಿಯೋ ಕಾನ್ಫರೆನ್ಸ್/ವೆಬ್ ಕಾಸ್ಟ್ ಮೂಲಕ**

ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಲೋಕಿಕೆರೆ ಸಿದ್ದಪ್ಪ ಟಿ.ಹೆಚ್.,** ಇವರ ಘನ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಈ ನೂತನ ಆವಿಷ್ಕಾರದ ಮೂಲಕ ನಡೆಯುವ ವರ್ಚ್ಯುವಲ್ ಮಹಾಸಭೆಯಲ್ಲಿ ಸರ್ವ ಸದಸ್ಯರು ಭಾಗವಹಿಸಿ, ಈ ಮಹಾಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಲಾಗಿದೆ.

ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಸರ್ವ ಸದಸ್ಯರುಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದ್ದು, ಕೆಲವು ಆಹ್ವಾನ ಪತ್ರಿಕೆಗಳು ವಾಪಾಸ್ ಬಂದಿರುತ್ತವೆ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಬ್ಯಾಂಕಿನ ಕಛೇರಿ ವೇಳೆಯಲ್ಲಿ ಆಗಮಿಸಿ, ವಿಳಾಸವನ್ನು ಸರಿಪಡಿಸಿಕೊಂಡು ಆಹ್ವಾನ ಪತ್ರಿಕೆಯನ್ನು ಪಡೆಯಬಹುದು. ಜೊತೆಗೆ, **ವಿಡಿಯೋ ಕಾನ್ಫರೆನ್ಸ್/ವೆಬ್ ಕಾಸ್ಟ್ ಮೂಲಕ** ನಡೆಯುತ್ತಿರುವ ಈ ಸಭೆಗೆ ಸಂಬಂಧಿಸಿದಂತೆ ವೆಬ್ ಲಿಂಕನ್ನು ಮಾನ್ಯ ಸದಸ್ಯರ ವ್ಯಾಟ್ಸಾಪ್‌ಗಳಿಗೆ ಕಳುಹಿಸಬೇಕಾಗಿರುವುದರಿಂದ ಮಾನ್ಯ ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಗಳನ್ನು ಬ್ಯಾಂಕಿನ ಕಛೇರಿ ವೇಳೆಯಲ್ಲಿ ಆಗಮಿಸಿ ನೋಂದಾಯಿಸುವಂತೆ ಈ ಮೂಲಕ ಕೋರಲಾಗಿದೆ.

ಸ್ಥಳ : ದಾವಣಗೆರೆ.

ದಿನಾಂಕ : 21.10.2021

ಸಹಿ/-

ಆಡಳಿತ ಮಂಡಳಿಯ ಆದೇಶದ ಮೇರೆಗೆ, (ಬಿ.ಎಲ್. ಗೌಡ), ವ್ಯವಸ್ಥಾಪಕರು



## ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

**# 683/2, 8ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ - 577 002.**

**ದೂರವಾಣಿ : 08192-259693**

## ಸ್ಥಿರ ಸ್ವತ್ತಿನ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಯಾವತ್ತೂ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಸೊಸೈಟಿಯಲ್ಲಿ ಸಾಲವನ್ನು ಪಡೆದು ಮರುಪಾವತಿ ಮಾಡದೇ ಸುಸ್ತಿಯಾಗಿರುವ ಈ ಕೆಳಕಂಡ ಸುಸ್ತಿದಾರರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿಯಲ್ಲಿ ಡಿಕ್ರಿ ಅವಾರ್ಡಿನ ಆದೇಶದ ಪ್ರಕಾರ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ನ್ಯಾಯಾಲಯದಲ್ಲಿ ಅಮಲ್ಜಾರಿ ಹುಕ್ಕುಂ ಪಡೆದು ಷೆಡ್ಯೂಲ್ ಸ್ವತ್ತನ್ನು ಬಹಿರಂಗ ಹರಾಜು ಮಾಡಲಾಗುತ್ತಿದೆ. ಇಚ್ಚೆಯುಳ್ಳವರು ಹರಾಜಿನಲ್ಲಿ ಭಾಗವಹಿಸಿ, ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸ್ವತ್ತನ್ನು ಪಡೆಯಬಹುದು.

| ಕ್ರ. ಸಂ. | ತೀರ್ಪು ಸಾಲಗಾರರ ಹೆಸರು ಮತ್ತು ವಿಳಾಸ | ಬಾಕಿಯಾಗಿರುವ ಸಾಲದ ಅಸಲು ಬಡ್ಡಿ ಮತ್ತು ಇತರೆ ಖರ್ಚು | ಹರಾಜಿಗೆ ಒಳಪಡಿಸಿರುವ ಸ್ವತ್ತಿನ ವಿವರ | ಹರಾಜು ನಡೆಯುವ ಸ್ಥಳ ಮತ್ತು ವೇಳೆ |
|---|---|---|---|---|
| 01. | ಶ್ರೀ ಚಂದ್ರಯ್ಯ ಡಿ. ಬಿನ್ ರೇವಣಸಿದ್ದಯ್ಯ, ಮನೆ ಸಂ. 855/56, 1ನೇ ಹಂತ, 2ನೇ ಕ್ರಾಸ್, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ ಇಪಿ ಸಂಖ್ಯೆ : 37/2018-19 | ಅಸಲು ರೂ. 15,81,248=00 + ಈ ತಹಲ್‌ವರೆಗೆ ಬಡ್ಡಿ + ಇತರೆ ಖರ್ಚು ಇದ್ದಲ್ಲಿ | ದಾವಣಗೆರೆ ನಗರದ ಶಿವಕುಮಾರಸ್ವಾಮಿ ಬಡಾವಣೆ, ಒಂದನೇ ಹಂತ, 2ನೇ ಅಡ್ಡರಸ್ತೆ, ಸೈಟ್ ಸಂಖ್ಯೆ 56, ಮನೆ ಹಳೇ ನಂ. 855, ಹಾಲಿ ಡೋರ್ ನಂ. 855/56, ಖಾನೇಷುಮಾರಿ ನಂ. 682 ಇರುವ ಆರ್‌ಸಿಸಿ ಮೇಲ್ಛಾವಣಿ ಹೊಂದಿರುವ ನಾಲ್ಕು ಅಂತಸ್ತಿನ ಮನೆ | ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ಮುಂಭಾಗದಲ್ಲಿ ದಿನಾಂಕ 12-11-2021 ನೇ ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ |

**ಸೂಚನೆ :** (1) ಹರಾಜಿನಲ್ಲಿ ಬಿಡ್ ಸವಾಲು ಮಾಡತಕ್ಕವರು ಹರಾಜಿಗೆ ಮುಂಚೆ ರೂ.25,000=00 ನಗದು ಹಣವನ್ನು ಮಾರಾಟಾಧಿಕಾರಿಗಳವರ ಕಡೆ ಪಾವತಿ ಮಾಡತಕ್ಕದ್ದು. ಸೊಸೈಟಿಯವರು ಭಾಗವಹಿಸಿದಲ್ಲಿ ಸದರಿ ಡಿಪಾಸಿಟ್ ಪಾವತಿ ಮಾಡಬೇಕಾಗಿಲ್ಲ. (2) ಅತ್ಯಧಿಕ ಸವಾಲು ಮಾಡಿ ಸ್ವತ್ತುಗಳನ್ನು ಕೊಳ್ಳುವವರು ಮಾರಾಟಾಧಿಕಾರಿಗಳು ಹರಾಜನ್ನು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡಾ 15ರಷ್ಟು ಹಣವನ್ನು ಆ ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರಿಗೆ ಹಾಗೂ ನೋಂದಣಿಗೆ ತಗಲುವ ವೆಚ್ಚವನ್ನು ಹರಾಜು ಆದ 45 ದಿವಸಗಳೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಡಿಪಾಸಿಟ್ ಮೊತ್ತವನ್ನು ಸೊಸೈಟಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (3) ಮಾರಾಟಾಧಿಕಾರಿಗಳು ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಯಾವುದೇ ಕಾರಣವನ್ನು ನೀಡದೆ ಮುಂದೂಡುವ ಇಲ್ಲವೇ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ. (4) ಈ ಸ್ಥಿರಾಸ್ತಿಯು ಹೇಗಿದೆಯೋ ಹಾಗೆ ಹರಾಜು ಮಾಡಲಾಗುವುದು. (5) ಹರಾಜಿನಲ್ಲಿ ಭಾಗವಹಿಸುವವರು ತಮ್ಮ ಗುರುತಿನ ಚೀಟಿ ಹಾಗೂ ವಿಳಾಸ ದೃಢೀಕರಣ ಪತ್ರವನ್ನು ಒದಗಿಸತಕ್ಕದ್ದು (6) ಹೆಚ್ಚಿನ ಮಾಹಿತಿಗಾಗಿ ಮಾರಾಟಾಧಿಕಾರಿಗಳನ್ನು ಅಥವಾ ಸಂಘದ ಕಾರ್ಯದರ್ಶಿಯವರನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಅಧ್ಯಕ್ಷರು | ಸಹಿ/- ಪ್ರಭಾರ ಕಾರ್ಯದರ್ಶಿ | ಸಹಿ/- ಮಾರಾಟಾಧಿಕಾರಿಗಳು

## ಜಗಳೂರು : ನಾಡಿದ್ದು ಸಿ. ದೇವೇಂದ್ರಪ್ಪ ಕಾಂಗ್ರೆಸ್ ಸೇರ್ಪಡೆ



ಜಗಳೂರು, ನ.6- ಜೆಡಿಎಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ ಅವರು ಇದೇ ದಿನಾಂಕ 9 ರ ಮಂಗಳವಾರ ಬೆಳಿಗ್ಗೆ 12 ಗಂಟೆಗೆ ಬೆಂಗಳೂರಿನ ಕೆಪಿಸಿಸಿ ಕಛೇರಿಯಲ್ಲಿ ಕಾಂಗ್ರೆಸ್ ಪಕ್ಷದ ವರಿಷ್ಠರ ಸಮ್ಮುಖದಲ್ಲಿ ಅಧಿಕೃತವಾಗಿ ಸೇರ್ಪಡೆಯಾಗಲಿದ್ದಾರೆ ಎಂದು ಚಿಕ್ಕಮ್ಮನ ಹಟ್ಟಿ ದೇವೇಂದ್ರಪ್ಪ ತಿಳಿಸಿದ್ದಾರೆ.

ಪಟ್ಟಣದ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿ, ಕಳೆದ ತಿಂಗಳ 25 ರಂದು ನಡೆಯಬೇಕಿದ್ದ ಕಾರ್ಯಕ್ರಮವನ್ನು ನೋವಿನ ಸಂಗತಿಯ ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು. ಇದೀಗ ನಾಡಿದ್ದು ದಿನಾಂಕ 9 ರಂದು ಸೇರ್ಪಡೆಗೊಳಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ದಿನಾಂಕ ನಿಗದಿ ಮಾಡಿದ್ದಾರೆ. ಕ್ಷೇತ್ರದ ಕಾರ್ಯಕರ್ತರು ಬೆಳಿಗ್ಗೆ 6 ಗಂಟೆಗೆ ಪಟ್ಟಣದ ಅಂಬೇಡ್ಕರ್ ವೃತ್ತದ ಬಳಿ ಗಣೇಶ ದೇವಸ್ಥಾನದ ಹತ್ತಿರ ಸೇರಿಕೊಳ್ಳುವಂತೆ ಅವರು ಮನವಿ ಮಾಡಿದರು.

ಸಮಾಜದ ಕಟ್ಟಕಡೆಯ ಸಾಧಕರಾದ ಸುಲ್ತಾನ್ ಬೀ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದು ಶ್ಲಾಘನೀಯ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಸಿ. ತಿಪ್ಪೇಸ್ವಾಮಿ, ಗುರುಸಿದ್ದಪ್ಪ, ಟೀಪುಸಾಬ್, ಓಮಣ್ಣ, ತಿಮ್ಮಣ್ಣ, ಕೆಚ್ಚೇನಹಳ್ಳಿ ಶಿವಕುಮಾರ್ ಇನ್ನಿತರರಿದ್ದರು.

## ಎಲೆಬೇತೂರಿನಲ್ಲಿ ಗೋ ಪೂಜೆ



ದಾವಣಗೆರೆ, ನ. 6- ಇಲ್ಲಿಗೆ ಸಮೀಪದ ಎಲೆಬೇತೂರು ಗ್ರಾಮದಲ್ಲಿ ದೀಪಾವಳಿಯ ಬಲಿಪಾಡ್ಯಮಿ ದಿನದಂದು ಗೋ ಪೂಜೆಯನ್ನು ಶ್ರೀ ಆಂಜನೇಯ ದೇವಸ್ಥಾನ ಆವರಣದಲ್ಲಿ ನೆರವೇರಿಸಲಾಯಿತು.

ದೀಪಾವಳಿಯ ದಿನದಂದು ದೇವಾಲಯವನ್ನು ಸ್ವಚ್ಛಗೊಳಿಸಿ, ಮಾವಿನ ತೋರಣ, ಹೂಗಳಿಂದ ಅಲಂಕರಿಸಲಾಗಿತ್ತು. ನಂತರ ಗೋವನ್ನು ಕರೆತಂದು ಸ್ನಾನ ಮಾಡಿಸಿ, ಅರಿಷಿಣ ಕುಂಕುಮ ಹಚ್ಚಿ ಹೂವುಗಳಿಂದ ಅಲಂಕರಿಸಿ ಅಕ್ಕಿ, ಬೆಲ್ಲ, ಬಾಳೆಹಣ್ಣು ನೀಡಿ ದೀಪ ಬೆಳಗಿಸಿ, ಭಕ್ತರು ಪೂಜಿಸಿದರು. ದುಗ್ಗಾವತಿ ಚಿದಂಬರ ಭಟ್ರು ಗೋಪೂಜೆ ಕಾರ್ಯ ನೆರವೇರಿಸಿದರು. ಶ್ರೀ ವಿನಾಯಕ ಸಮಿತಿಯ ಅಧ್ಯಕ್ಷ ಬಿ. ಕೃಷ್ಣಮೂರ್ತಿ, ನಿವೃತ್ತ ಶಿಕ್ಷಕರ ನೇತೃತ್ವದಲ್ಲಿ ಕಾರ್ಯಕ್ರಮ ನೆರವೇರಿಸಲಾಯಿತು .

# ಕೆರೆ ಪುರುಷ ಬಸವರಾಜ ಕುಂಚೂರು

## 'ನಮ್ಮ ಕೆರೆಗಳು: ಸಾಂಪ್ರದಾಯಿಕ ಜಲಕನ್ನಡಿಗಳು' ಕೃತಿ ಇಂದು ಲೋಕಾರ್ಪಣೆ

ಕೆರೆ ಅಂಗಳದಾಗ ನೀರು ಇದ್ರೆ ಮನಿ ಗಂಗಾಳದಾಗ ಮುದ್ದಿ ಇದ್ದಂಗ; ಕೆರೆಯಲ್ಲಿ ನೀರಿದ್ದರೆ ಊರಿಗೆಲ್ಲ ಕನಸು; ಕೆರೆಯುಳ್ಳ ಊರು ಗಂಡುಳ್ಳ ಗರತಿಯಂತೆ, ಕೆರೆ ಬೇರು; ಊರು ಫಲ ಮುಂತಾದ ಗಾದೆ ಮಾತುಗಳು ಕೆರೆಯ ಮಹತ್ವವನ್ನು ಸೂಚಿಸುತ್ತವೆ. ಕೆರೆಗಳು ತುಂಬಿದ್ದರೆ ಊರು ಉಸಿರಾಡುತ್ತವೆ, ಊರು ಕಟ್ಟುವ ಮೊದಲು ಕೆರೆಕಟ್ಟು ಎಂಬ ಮಾತುಗಳು ಕೆರೆಗಳು ಗ್ರಾಮೀಣರ ಬದುಕಿನಲ್ಲಿ ಅವಿಭಾಜ್ಯ ಅಂಗವಾಗಿದ್ದವು ಎಂಬುದನ್ನು ತಿಳಿಸುತ್ತವೆ. ಹಿಂದೆ ರಾಜಮಹಾರಾಜರು, ಪಾಳೆಯಗಾರರು, ನಾಡ ಗೌಡ, ಊರಗೌಡ ಮುಂತಾದವರು ಕೆರೆಗಳನ್ನು ಕಟ್ಟಿಸುವುದರ ಮೂಲಕ ಜನೋಪಕಾರಿಗಳಾಗಿದ್ದರು.

ಕೆರೆಗಳ ಸುತ್ತ ಕಥೆ, ಕವಿತೆ, ಚರಿತೆ, ಹಾಡುಗಳಿವೆ. ತ್ಯಾಗ,ಬಲಿದಾನಗಳನ್ನು ಕುರಿತ ಐತಿಹ್ಯಗಳು, ನಂಬಿಕೆಗಳು, ಜಾನಪದ ಆಚರಣೆಗಳಿವೆ. ರೈತರ ಬದುಕು, ಪಶುಪಕ್ಷಿಗಳ ಜೀವನ, ಗಿಡಮರಗಳ ನಂಟು, ವಾಣಿಜ್ಯ ವ್ಯವಹಾರಗಳ ಸಂಬಂಧಗಳು ಈ ಕೆರೆಗಳನ್ನು ಅವಲಂಬಿಸಿವೆ. ಇಂತಹ ಮಹತ್ವದ ಕೆರೆಗಳ ಕುರಿತು ಬಸವರಾಜ ಕುಂಚೂರು ನಮ್ಮ ಕೆರೆಗಳು ಮತ್ತು ಹರಪನಹಳ್ಳಿ ತಾಲ್ಲೂಕಿನ ಕೆರೆಗಳು ಎಂಬ ಎರಡು ಕೃತಿಗಳನ್ನು ಈಗಾಗಲೇ ಹೊರತಂದಿದ್ದಾರೆ. ಈಗ 'ನಮ್ಮ ಕೆರೆಗಳು: ಸಾಂಪ್ರದಾಯಿಕ ಜಲಕನ್ನಡಿಗಳು' ಎಂಬ ದಾವಣಗೆರೆ ಜಿಲ್ಲೆಯ ವ್ಯಾಪ್ತಿಯ ಕೆರೆಗಳನ್ನು ಕುರಿತ ಮೂರನೆಯ ಕೃತಿಯನ್ನು ರಚಿಸಿದ್ದಾರೆ.



ಹರಪನಹಳ್ಳಿ ತಾಲ್ಲೂಕಿನ ಕುಂಚೂರಿನವರಾದ ಬಸವರಾಜ್ ಸಿವಿಲ್ ಇಂಜಿನಿಯರಿಂಗ್ ಡಿಪ್ಲೋಮಾ ಪದವೀಧರರು. ಸುರತ್ಕಲ್ಲಿನ ಪ್ರತಿಷ್ಠಿತ ರಾಷ್ಟ್ರೀಯ ತಾಂತ್ರಿಕ ಕಾಲೇಜಿನಲ್ಲಿ ಮೂರೂವರೆ ದಶಕಗಳ ಕಾಲ ಸೇವೆ ಸಲ್ಲಿಸಿ, ಸಹಾಯಕ ಇಂಜಿನಿಯರ್ ಆಗಿ ನಿವೃತ್ತರಾಗಿದ್ದಾರೆ. ಕುಂಬಾರಿಕೆ ಪದಕೋಶ, ಕೆರೆಗಳ ಪದಕೋಶ, ಕುಂಭಕಲೆ, ಗಡಿಗೆಯೊಳಗಣ ಅಡಿಗೆ, ಸಾವಿರ ಹಾಡುಗಳ ಸರದಾರ ಮುಂತಾದ ಹನ್ನೆರಡಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ವೀಚಿ ಸಾಹಿತ್ಯ ಪುರಸ್ಕಾರ, ಕಸಾಪ ದತ್ತಿ ಬಹುಮಾನಗಳು ಸೇರಿದಂತೆ ಹಲವು ಪ್ರಶಸ್ತಿಗಳು ಕುಂಚೂರರಿಗೆ ಸಂದಿವೆ.

ಪ್ರಸ್ತುತ 'ನಮ್ಮ ಕೆರೆಗಳು: ಸಾಂಪ್ರದಾಯಿಕ ಜಲಕನ್ನಡಿಗಳು' ಕೃತಿಯಲ್ಲಿ ಕೆರೆಗಳ ಕುರಿತ ಶಾಸನ, ಪ್ರಾಚೀನ ಕಾವ್ಯ, ಜನಪದ ಸಾಹಿತ್ಯ ಆಧುನಿಕ ಸಾಹಿತ್ಯ ಮುಂತಾದ ಆಕರಗಳಿವೆ. ದಾವಣಗೆರೆ ಜಿಲ್ಲೆಯ ತಾಲ್ಲೂಕುವಾರು ಸಮಗ್ರ ಕೆರೆಗಳ ಕುರಿತ ವಿವರಗಳಿವೆ. ಕೆರೆಗಳು ನಿರ್ಮಾಣವಾದ ಕಾಲ, ಏರಿಯಾ ಉದ್ದ-ಅಗಲ-ಎತ್ತರಗಳ ಅಳತೆ, ಜಲಾನಯನ ಪ್ರದೇಶ, ನೀರಾವರಿ ಅಚ್ಚುಕಟ್ಟು, ತಂತ್ರಜ್ಞಾನ, ನಂಬಿಕೆ, ಸಂಪ್ರದಾಯಗಳು ಮುಂತಾದ ಅಪೂರ್ವ ಮಾಹಿತಿಗಳಿವೆ.

ಈ ಕೃತಿಯನ್ನು ಕುರಿತು ಲೇಖಕಿ ಕೆ.ಆರ್. ಮಂಗಳ ಕೆರೆಗಳ ಇವತ್ತಿನ ಅವಸ್ಥೆಯ ಬಗೆಗೂ ಬೆಳಕು ಚೆಲ್ಲುವುದರಿಂದ ಪರಿಸರ ಇಲಾಖೆಗೂ ಜಿಲ್ಲಾ ಆಡಳಿತಕ್ಕೂ ಇದು ಉತ್ತಮ ಮಾರ್ಗದರ್ಶಿ. ಸರ್ಕಾರವನ್ನು ಕಾಯದೇ ರಕ್ಷಣೆಗಾಗಿ ಧಾವಿಸುವ ಜಲ ಯೋಧರಿಗೆ, ಪರಿಸರ ಸಂರಕ್ಷಕರಿಗೆ ಇದು ನಿಸ್ಸಂದೇಹವಾಗಿ ಅತ್ಯುತ್ತಮ ಕೈಪಿಡಿ' ಎಂದಿದ್ದಾರೆ. ಹೌದು ಇದು ನಿಜಕ್ಕೂ ಬೃಹತ್ತಾದ ಮಹತ್ತಾದ ಕೃತಿ. ನಾಲ್ಕಾರು ಪಿಎಚ್‌ಡಿ ಪದವಿಗಳಿಗೆ ಅಧ್ಯಯನ, ಸಂಶೋಧನೆ ಆಗುವಷ್ಟು ವಸ್ತು ವೈವಿಧ್ಯದ ಕೃತಿ. ಕೇವಲ ಅನುಭವ, ಆಸಕ್ತಿ, ಹವ್ಯಾಸ, ಕಳಕಳಿಯಿಂದ ರಚಿತವಾದ ಈ ಕೃತಿ ಜಿಲ್ಲೆಯ ಪ್ರಮುಖ ಆಕರ ಗ್ರಂಥ. ಇಂತಹ ಬೃಹತ್ ಗ್ರಂಥವು ಸಿದ್ಧಗಂಗಾ ಶಾಲಾ ಆವರಣದಲ್ಲಿ ಇಂದು ಲೋಕಾರ್ಪಣೆಗೊಳ್ಳಲಿದೆ. ಜೊತೆಗೆ ಕೆರೆಗಳ ಕುರಿತ ವಿಚಾರ ಸಂಕಿರಣವನ್ನೂ ಹಮ್ಮಿಕೊಳ್ಳಲಾಗಿದೆ.

ಬನ್ನಿ ಭಾಗವಹಿಸಿ, ನಮ್ಮ ಕೆರೆಗಳ ಹಿಂದಿನ ಕಥೆ ಇಂದಿನ ವ್ಯಥೆಯನ್ನು ತಿಳಿಯೋಣ.

**- ನಾಗರಾಜ ಸಿರಿಗೆರೆ**, ದಾವಣಗೆರೆ.

## ಕೊಮಾರನಹಳ್ಳಿಯಲ್ಲಿ ಗೋ ಪೂಜೆ



ಮಲೇಬೆನ್ನೂರು, ನ.6- ಕೊಮಾರನಹಳ್ಳಿ ಗ್ರಾಮದ ಹೆಳವನಕಟ್ಟೆ ಶ್ರೀ ಲಕ್ಷ್ಮೀ ರಂಗನಾಥಸ್ವಾಮಿ ದೇವಸ್ಥಾನದಲ್ಲಿಯೂ ದೇವಸ್ಥಾನದ ಆಡಳಿತಾಧಿಕಾರಿಗಳೂ ಆದ ಉಪ ತಹಶೀಲ್ದಾರ್ ಆರ್. ರವಿ ಅವರು ಗೋ ಪೂಜೆ ನೆರವೇರಿಸಿದರು.

ಗೋವನ್ನು ದೇವಾಲಯಕ್ಕೆ ಕರೆ ತಂದು ಅರಿಶಿಣ-ಕುಂಕುಮ, ಹೂವುಗಳಿಂದ ಅಲಂಕರಿಸಿ, ಪೂಜೆ ಸಲ್ಲಿಸಿದ ನಂತರ ಅಕ್ಕಿ, ಬೆಲ್ಲ, ಬಾಳೆಹಣ್ಣುಗಳನ್ನು ಹಸುವಿಗೆ ತಿನ್ನಿಸಲಾಯಿತು.

ನಂತರ ಮಹಿಳೆಯರು ಆರತಿ ಬೆಳಗಿ ಗೋವಿಗೆ ನಮಸ್ಕರಿಸಿದರು. ದೇವಸ್ಥಾನದ ಶಾನುಭೋಗರಾದ ಧರ್ಮರಾವ್, ಅರ್ಚಕರಾದ ಮಂಜುನಾಥ್ ಚಾರ್ಯ, ಗುರುನಾಥಚಾರ್ಯ, ಅಮರನಾಥ್ ಜೋಯಿಸ್ ಪೂಜಾ ಕಾರ್ಯಕ್ರಮ ನಡೆಸಿಕೊಟ್ಟರು.

ಪುರಸಭೆ ಮುಖ್ಯಾಧಿಕಾರಿ ಡೊಂಬರ್, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ದಿಶಾ ಸಮಿತಿ ಸದಸ್ಯ ಐರಣಿ ಅಣ್ಣಪ್ಪ, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಮಲೇಬೆನ್ನೂರು ಪಿಎಸಿಎಸ್ ಅಧ್ಯಕ್ಷ ಪಿ.ಆರ್. ಕುಮಾರ್, ಗ್ರಾಮದ ಐರಣಿ ಮಹೇಶ್ವರಪ್ಪ, ರಾಮಣ್ಣ ಸ್ವಾಮಿ, ಸಿಂಗಟಗೆರೆ ರಂಗಪ್ಪ, ಸೊಂಡಪ್ಪರ ಬಸವರಾಜಪ್ಪ, ಜಿ. ಸುನೀಲ್, ಮಡಿವಾಳರ ಆಂಜನೇಯ, ಶ್ರೀಧರ್‌ಚಾರ್, ಪಿಗ್ಮಿ ರಾಮ್ ರಾವ್, ಹಾಲಿವಾಣದ ಮೋಹನ್, ಮೆಡಿಕಲ್ ಷಾಪ್ ಎನ್.ಕೆ. ರಾಜೀವ್ ಇನ್ನಿತರರು ಈ ವೇಳೆ ಹಾಜರಿದ್ದರು. ಪೂಜೆಯ ನಂತರ ಎಲ್ಲರಿಗೂ ಪ್ರಸಾದ ವಿತರಿಸಲಾಯಿತು.

## ಅನಿಲ ಬೆಲೆ ಏರಿಕೆಯಿಂದ ಕಟ್ಟಿಗೆ ಒಲೆ ಬಳಸುವ ಪರಿಸ್ಥಿತಿ



ನವದೆಹಲಿ, ನ. 6 - ಅಡುಗೆ ಅನಿಲ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಲಕ್ಷಾಂತರ ಕುಟುಂಬಗಳು ಮತ್ತೆ ಕಟ್ಟಿಗೆ ಒಲೆ ಬಳಸುವ ಪರಿಸ್ಥಿತಿ ಬಂದಿದೆ ಎಂದಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಭಿವೃದ್ಧಿ ವಾಹನ ಹಿಮ್ಮುಖವಾಗಿ ಸಾಗಿದೆ ಎಂದವರು ಲೇವಡಿ ಮಾಡಿದ್ದಾರೆ.ಸಮೀಕ್ಷೆಯೊಂದರ ಪ್ರಕಾರ ಶೇ.42ರಷ್ಟು ಗ್ರಾಮೀಣ ಜನರು ಅಡುಗೆ ಅನಿಲ ಬಳಸುವುದನ್ನು ನಿಲ್ಲಿಸಿದ್ದಾರೆ. ಅಡುಗೆ ಅನಿಲ ದುಬಾರಿಯಾಗಿರುವ ಕಾರಣ ಅವರು ಮತ್ತೆ ಕಟ್ಟಿಗೆ ಬಳಸುತ್ತಿದ್ದಾರೆ ಎಂಬ ಪತ್ರಿಕಾ ವರದಿಯೊಂದನ್ನೂ ಸಹ ರಾಹುಲ್ ಗಾಂಧಿ ಉಲ್ಲೇಖಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ಸಂಭ್ರಮದ ಗೋ ಪೂಜೆ



ಮಲೇಬೆನ್ನೂರು, ನ.6- ಪಟ್ಟಣದ ಶ್ರೀ ಬಸವೇಶ್ವರ ಮತ್ತು ಶ್ರೀ ಏಕನಾಥೇಶ್ವರಿ, ಕೋಡಿ ಮಾರೇಶ್ವರಿ ದೇವಸ್ಥಾನದಲ್ಲಿ ಸರ್ಕಾರದ ಸೂಚನೆಯಂತೆ ದೀಪಾವಳಿಯ ಬಲಿಪಾಡ್ಯಮಿ ದಿನವಾದ ಶುಕ್ರವಾರ ಗೋಧೂಳಿ ಲಗ್ನದಲ್ಲಿ ಗೋ ಪೂಜೆಯನ್ನು ಉಪತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ಡೊಂಬರ್ ಅವರು ಗ್ರಾಮಸ್ಥರ ಸಮ್ಮುಖದಲ್ಲಿ ನೆರವೇರಿಸಿದರು.

ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗವಾದ ಗೋವುಗಳ ಮಹತ್ವ ಹಾಗೂ ಸಂರಕ್ಷಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿರುವುದರಿಂದ ಗೋ ಮಾತೆಯನ್ನು ಪೂಜಿಸಿ, ಗೋಮಾತೆಯನ್ನು ಸಂರಕ್ಷಿಸುವ ಸಲುವಾಗಿ ನಾಡಿನ ಎಲ್ಲಾ ಮುಜರಾಯಿ ದೇವಸ್ಥಾನಗಳಲ್ಲಿ ಬಲಿಪಾಡ್ಯಮಿ ದಿನದಂದು ಗೋಧೂಳಿ ಲಗ್ನದಲ್ಲಿ ಈ ಕಾರ್ಯಕ್ರಮವನ್ನು ಸರ್ಕಾರದ ನಿರ್ದೇಶನದಂತೆ ವಿಶೇಷವಾಗಿ ಹಮ್ಮಿಕೊಳ್ಳಲಾಗಿದೆ ಎಂದು ಉಪತಹಶೀಲ್ದಾರ್ ಆರ್. ರವಿ ಪತ್ರಕರ್ತರಿಗೆ ತಿಳಿಸಿದರು.

ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಪಿಎಸಿಎಸ್ ಅಧ್ಯಕ್ಷ ಪಿ.ಆರ್. ಕುಮಾರ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ಪಟ್ಟಣದ ಹಿರಿಯರಾದ ಪೂಜಾರ್ ಬಸಪ್ಪ, ಪೂಜಾರ್ ರೇವಣಪ್ಪ, ಕೆ.ಜಿ. ಪರಮೇಶ್ವರಪ್ಪ, ಕೆ.ಪಿ. ಗಂಗಾಧರ್ ಪೂಜಾರ್, ಗಂಗೆನಳ್ಳಪ್ಪ, ಪೂಜಾರ್ ನಾಗಪ್ಪ, ಹುಳ್ಳಳ್ಳಿ ಸಿದ್ದೇಶ್, ಬೆಣ್ಣೆಹಳ್ಳಿ ಸಿದ್ದೇಶ್, ಬೆಣ್ಣೆಹಳ್ಳಿ ಬಸವರಾಜ್, ಪೂಜಾರ್ ಬೀರಪ್ಪ, ಪಾನಿಪೂರಿ ರಂಗನಾಥ್, ಸಿರಿಗೆರೆ ಪುಟ್ಟಪ್ಪ, ಉಡೇದರ ಸಿದ್ದೇಶ್, ವಸಂತಪ್ಪ, ಪರಸಪ್ಪ, ಪಿ.ಹೆಚ್. ಶಿವಕುಮಾರ್, ಪಿ.ಆರ್. ರಾಜು, ಮೆಡಿಕಲ್ ಷಾಪ್ ಎನ್.ಕೆ. ರಾಜೀವ್, ಬುಕ್‌ಸ್ಟಾಲ್ ವೇಣುಗೋಪಾಲ್, ಪ್ರಸನ್ನ ಗುಪ್ತ, ಜಿ. ಸುನೀಲ್ ಸೇರಿದಂತೆ ಅನೇಕರು ಹಾಜರಿದ್ದರು. ಅರ್ಚಕರಾದ ಪ್ರಕಾಶಚಾರ್ ಮತ್ತು ಬ್ರಹ್ಮಾಚಾರ್ ಪೂಜಾ ವಿಧಿ, ವಿಧಾನಗಳನ್ನು ನಡೆಸಿಕೊಟ್ಟರು.


**ಮನೆ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪೋದಾರ್ ಇಂಟರ್ ನ್ಯಾಷನಲ್ ಸ್ಕೂಲ್ ಹತ್ತಿರ 20x30 ಅಳತೆಯ 2 ಬೆಡ್ ರೂಂನ ಮನೆ ಹಾಗೂ ಮೇಲ್ಭಾಗದಲ್ಲಿ ರೂಂ ಇರುವ ಉತ್ತರ ದಿಕ್ಕಿನ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
80503 98121
94482 33389

**ಮನೆ ಮಾರಾಟಕ್ಕಿದೆ**
ದಾವಣಗೆರೆ ತರಳಬಾಳು ಬಡಾವಣೆ, 2ನೇ ಮೇನ್, 3ನೇ ಕ್ರಾಸ್‌ನ ಕಾರ್ನರ್ ಗ್ರೌಂಡ್‌ಫ್ಲೋರ್‌ನಲ್ಲಿ 3 ಬೆಡ್ ರೂಂನ ಮನೆ ಹಾಗೂ ಮೊದಲ ಮಹಡಿಯಲ್ಲಿ 2 ಬೆಡ್ ರೂಂನ ಎರಡು ಮನೆಗಳು ಇರುವ ಬಿಲ್ಡಿಂಗ್ ಮಾರಾಟಕ್ಕಿದೆ.
94814 52642

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆಯಲ್ಲಿ 30×50 ಪೂರ್ವ, 30×40 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30×50 ಉತ್ತರ, 30×50 ಪಶ್ಚಿಮ, ಡಾಲರ್ಸ್ ಕಾಲೋನಿ 30×50 ದಕ್ಷಿಣ, 30×40 ಉತ್ತರ,
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಮಹಿಳಾ ಪಿ.ಜಿ.**
ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನ ಹತ್ತಿರ ದಾವಣಗೆರೆ.
90601 72745

**ಬೇಕಾಗಿದ್ದಾರೆ**
1. ದಾವಣಗೆರೆಯಲ್ಲಿ ಮನೆ ಬಳಿ ಮತ್ತು ಹೊರಗಿನ ಕೆಲಸ ಮಾಡಲು ಬೇಕಾಗಿದ್ದಾರೆ.
2. ದಾವಣಗೆರೆ ಸಮೀಪ ಹೊಲದಲ್ಲಿ ಕೆಲಸ ಮಾಡಲು ಮತ್ತು ಆಕಳು ನೋಡಿಕೊಳ್ಳಲು ಬೇಕಾಗಿದ್ದಾರೆ.
70185 88900, 95388 70257

**ಮನೆಗಳು ಬಾಡಿಗೆ/ಲೀಸ್‌ಗಿವೆ**
ಸಿಂಗಲ್ ಬೆಡ್ ರೂಂ ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆ 1/2 ಪರ್ಸೆಂಟ್ ಕಮೀಷನ್ ಆಧಾರದ ಮೇಲೆ
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಸೈಟುಗಳು ಮಾರಾಟಕ್ಕಿವೆ**
ದೀಪಾವಳಿ ಹಬ್ಬದ ಶುಭಾಶಯಗಳು ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾತಿಯಲ್ಲಿ ಮಾರಾಟಕ್ಕಿವೆ. Rs. 999 Sq.ft ಹಾಗೂ ಸುಲಭ ಕಂತಿನಲ್ಲಿ ಲಭ್ಯ. 30x40, 30x50
94829-48699, 94814-58699, 93431-10009

**ಕೆಲಸಕ್ಕೆ ಬೇಕಾಗಿದ್ದಾರೆ**
ಆಲ್ಬಮ್ ವರ್ಕ್ ಮತ್ತು DTP ಟೈಪಿಂಗ್, ಜೆರಾಕ್ಸ್ ಮಾಡಲು ಬೇಕಾಗಿದ್ದಾರೆ.
ನ್ಯೂ ನೇಚರ್ ಕ್ರಿಯೇಷನ್
88808 89806
70192 72603

**ಮನೆ ಬಾಡಿಗೆ/ಲೀಸ್ ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆ/ಲೀಸ್ ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
77953 80779

**ಮನೆ ಲೀಸ್‌ಗೆ ಇದೆ**
ಸುಸಜ್ಜಿತ ವಾಸ್ತುಪ್ರಕಾರ ಉತ್ತರಾಭಿಮುಖವಾಗಿರುವ ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ, ಪೂಜಾ ರೂಂ ಇರುವ 9 ಚದರವುಳ್ಳ, 24 ಗಂಟೆ ನೀರಿನ ವ್ಯವಸ್ಥೆ ಇರುವ ಮನೆ, ರಂಗನಾಥ ಬಡಾವಣೆಯಲ್ಲಿದೆ ಸಂಪರ್ಕಿಸಿ
91085 42929

**ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಶಾಲೆ, ಎಲೆಬೇತೂರು**
ಅನುಭವವಿರುವ ಚಾಲಕರು (ಡ್ರೈವರ್) ಬೇಕಾಗಿದ್ದಾರೆ.
82771 79966
98866 54845

**ಕೆಲಸಗಾರರು ಬೇಕಾಗಿದ್ದಾರೆ**
ಫೋಟೋ ಶಾಪ್ ಅಥವಾ ಕೋರಲ್ ಡ್ರಾ ನುರಿತ ಕೆಲಸಗಾರರು ಬೇಕಾಗಿದ್ದಾರೆ.
ಸುರೇಶ್ ಇಮೇಜಸ್
ಫ್ಲೆಕ್ಸ್ -ಬ್ಯಾನರ್- ಡಿಜಿಟಲ್ ಪ್ರಿಂಟಿಂಗ್
ಸಿ.ವಿ. ಕಾಂಪ್ಲೆಕ್ಸ್, ಗಡಿಯಾರ ಕಂಬದ ಹತ್ತಿರ, ಹೆಡ್ ಪೋಸ್ಟ್ ಆಫೀಸ್ ಎದುರು, ದಾವಣಗೆರೆ.
98450 05469

**ಬೇಕಾಗಿದ್ದಾರೆ**
ಗಣಿತ ಮತ್ತು ಭೌತಶಾಸ್ತ್ರ ವಿಷಯವನ್ನು ಬೋಧಿಸುವ ಶಿಕ್ಷಕರು ಹಾಗೂ ಹಾಸ್ಟೆಲ್‌ಗೆ ಲೇಡಿ ವಾರ್ಡನ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ: ಎಂ.ಇ.ಎಸ್ ಕಾನ್ವೆಂಟ್, 9ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ.
ಮೊ.98804 36414

**ಪೇಪರ್ ಕಪ್ ಮಷಿನ್ ಮಾರಾಟಕ್ಕಿವೆ**
ಉತ್ತಮ ಚಾಲೂ ಸ್ಥಿತಿಯಲ್ಲಿರುವ ಪೇಪರ್ ಕಪ್ ಮೇಕಿಂಗ್ ಮಷಿನ್ ಮಾರಾಟಕ್ಕಿವೆ. ತಕ್ಷಣ ಸಂಪರ್ಕಿಸಿ. ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಮಾತ್ರ
95916 64448

**ಬೇಕಾಗಿದ್ದಾರೆ**
ಅನುಭವವುಳ್ಳ ಸ್ಟಾಫ್ ನರ್ಸ್ ಬೇಕಾಗಿದ್ದಾರೆ
ಉತ್ತಮ ಸ್ಯಾಲರಿ ನೀಡಲಾಗುವುದು.
ಮೊ : 99725 23910

**WANTED**
◆ Manager
◆ Executives
www.nextstepz.in
89700 66666
99645 46667

**ಬೇಕಾಗಿದ್ದಾರೆ**
ಕನ್ನಡಕದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ವಿದ್ಯಾಹರ್ತೆ: PUC & Above
97392 94950
87623 33702

**ನಂದಿನಿ ಹೋಟೆಲ್**
ಹೋಟೆಲ್ ನಲ್ಲಿ ಕೆಲಸ ಮಾಡಲು ಭಟ್ಟರು ಬೇಕಾಗಿದ್ದಾರೆ. ಪಾತ್ರೆ ತೊಳೆಯಲು ಹಾಗೂ ಮನೆಯಲ್ಲಿ ಚಪಾತಿ ಮತ್ತು ಅಡುಗೆ ಮಾಡಲು ಕೆಲಸದವರು ಬೇಕಾಗಿದ್ದಾರೆ. ಕ್ಲೀನಿಂಗ್‌ಗೆ ಬೇಕಾಗಿದ್ದಾರೆ. ಸ್ಥಳ: ಶಕ್ತಿನಗರ 1ನೇ ಮುಖ್ಯರಸ್ತೆ, ಜೀನಿಯಸ್ ಶಾಲೆ ಪಕ್ಕ.
94835 32186

**Share Market**
Free Demat A/c, Learning & Earning Trading & Technical, Fundamental Basic Knowledage, Free Training & Education
Mr. Sathish
95382 28125

**ಮನೆ ಬಾಡಿಗೆಗೆ ಇದೆ**
ಸಿಂಗಲ್ ಬೆಡ್ ರೂಮ್ ಮತ್ತು ಡಬಲ್ ಬೆಡ್ ರೂಮ್ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ) ಸ್ಥಳ: ನಿಜಲಿಂಗಪ್ಪ ಲೇಔಟ್ ಸರ್ಕಾರಿ ನೌಕರರ ಭವನ ಹತ್ತಿರ
77605 62788

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ 12ನೇ ಕ್ರಾಸ್, 3ನೇ ಮೇನ್‌ನಲ್ಲಿ ಪೂರ್ವ ದಿಕ್ಕಿನ, 24 ಗಂಟೆ ನೀರಿನ ಸೌಲಭ್ಯವಿರುವ, ವಿಶಾಲವಾದ ಹಾಲ್ ಹೊಂದಿರುವ ಮನೆ, ಎರಡನೇ ಮಹಡಿಯಲ್ಲಿ ಒಂದು ಬೆಡ್ ರೂಂನ ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ
94489 23709
94807 78709

**ಸೈಟು ಮಾರಾಟಕ್ಕಿದೆ**
ಡೋರ್ ನಂ.849/1, 60×40 North Facing. ಮಂಜುನಾಥ ಕಾಲೇಜು ಹತ್ತಿರ, ಸರಸ್ವತಿ ನಗರ.
ಸಂಪರ್ಕಿಸಿ
88676 95774

**ಮಹಿಳೆ ಬೇಕಾಗಿದ್ದಾರೆ**
ಬೆಳಿಗ್ಗೆ 9 ರಿಂದ ಸಂಜೆ 6.30ರವರೆಗೆ ಅಥವಾ ದಿನದ 24 ಗಂಟೆಯೂ ವಯಸ್ಸಾದವರನ್ನು ನೋಡಿಕೊಳ್ಳುವುದರೊಂದಿಗೆ ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ :
63639-54459

**ಪಿತ್ರಾರ್ಜಿತ/ ಕುಟುಂಬದ ಆಸ್ತಿ**
ನಿಮ್ಮ ಕುಟುಂಬದ ಪೂರ್ವಜರ ಮತ್ತು ಒಟ್ಟು ಕುಟುಂಬದ ಆಸ್ತಿಗಳಿಂದ ನಿಮಗೆ ಬರಬೇಕಾಗಿರತಕ್ಕ ಪಾಲಿನ ಭಾಗ ಪಡೆಯಲು ಸಂಪರ್ಕಿಸಿ.
ಹೊನ್ನೂರಸ್ವಾಮಿ ವಾಂಜ್ರೆ
87926 04196

**WANTED**
Retail Counter Sales Staff
PUC & Above
Optometrist
Degree/Diploma Optometry
Exp - 1 Year
98861 70950

**ಸೋಫಾ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಶನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು
Swapna Cushion Work
Behind Vittal Temple, Maharaj Pet, Davanagere
98445 81966

**ಬಾಡಿಗೆಗೆ/ಲೀಸ್‌ಗೆ**
ಕೆ.ಟಿ.ಜೆ ನಗರ 16ನೇ ಕ್ರಾಸ್‌ನಲ್ಲಿ ಡಬಲ್ ಬೆಡ್‌ರೂಂ ಮನೆ ಬಾಡಿಗೆಗೆ ಹಾಗೂ ಲೀಸ್‌ಗೆ ಇದೆ. ಸಂಪರ್ಕಿಸಿ
99452 31451
70223 03789

**ಮನೆ ಮಾರಾಟಕ್ಕಿದೆ**
30×40 ಮತ್ತು 20×30 ಮನೆ ಮಾರಾಟಕ್ಕಿದೆ. SS ಹಾಸ್ಪಿಟಲ್ ಹಿಂಭಾಗ ಸಿದ್ಧಗಂಗಾ ಬಡಾವಣೆ, ದಾವಣಗೆರೆ.
97388 79753

**ಮನೆ ಲೀಸ್/ಬಾಡಿಗೆಗಿದೆ**
# 5626/7 "ಜ್ಯೋತಿ ನಿಲಯ" ಎಸ್.ಎಸ್. ಬಡಾವಣೆ, 'ಬಿ'ಬ್ಲಾಕ್, ಡಬಲ್ ಬೆಡ್ ರೂಮ್ ವಾಸ್ತು ಪ್ರಕಾರವಿದ್ದು, ಗ್ರೌಂಡ್ ಫ್ಲೋರ್ ಮನೆ, ಅಳತೆ 50x30 ಶುದ್ಧ ಸಸ್ಯಹಾರಿಗಳಿಗೆ ಮಾತ್ರ, ಯಾವುದೇ ಮಧ್ಯರ್ತಿಗಳಿಗೆ ಅವಕಾಶವಿಲ್ಲ. ಶ್ರೀ ರಾಘವೇಂದ್ರ ನರ್ಸಿಂಗ್ ಕಾಲೇಜ್ ಹತ್ತಿರ, ಇಂಜಿನಿಯರ್ ಅಸೋಸಿಯೇಷನ್ ಬಿಲ್ಡಿಂಗ್. ಸುರೇಶ್ ಕುಮಾರ್ ಎ.ಎನ್. ಮತ್ತು ರಾಮಕೃಷ್ಣ ಎ.ಎಸ್.
9341004279/9741740929

**ಮನೆ ಲೀಸ್‌ಗಿದೆ**
ನಿಟುವಳ್ಳಿ ಹೊಸ ಬಡಾವಣೆಯಲ್ಲಿ ಮೊದಲನೆ ಮಹಡಿ ಉತ್ತರ ದಿಕ್ಕಿನಲ್ಲಿ ಮನೆ 8 ಲಕ್ಷಕ್ಕೆ ಲೀಸ್ ಗಿದೆ.
ಸಸ್ಯಹಾರಿಗಳಿಗೆ ಆದ್ಯತೆ
9743559986
7892825328

**ಆಸ್ತಿ ಖರೀದಿಸಿರುವ ಬಗ್ಗೆ**
ನೀವು ಕ್ರಯಕ್ಕೆ ಖರೀದಿಸಿ ಮುಂಗಡ ಹಣ ನೀಡಿದರೂ ನಿಮ್ಮ ಹೆಸರಿಗೆ ಕ್ರಯ ಪತ್ರ ರಿಜಿಸ್ಟರ್ ಆಗಿರದ ಮನೆ, ಸೈಟು, ಜಮೀನುಗಳ ಬಗ್ಗೆ ಇರತಕ್ಕ ತಕರಾರನ್ನು ಪರಿಹರಿಸಿಕೊಳ್ಳಲು ಸಂಪರ್ಕಿಸಿ:
ಹೊನ್ನೂರ ಸ್ವಾಮಿ ವಾಂಜ್ರೆ
87926 04196

**ಪ್ರಾಂಸರಿ ನೋಟಿನ ಬಗ್ಗೆ**
ಪ್ರಾಂಸರಿ ನೋಟು ಬರೆದುಕೊಟ್ಟು ನಿಮ್ಮಿಂದ ಸಾಲ ಪಡೆದ ಬಾಬ್ತು ಹಾಗೇ ಬಾಕಿ ಉಳಿಯುತ್ತಾ ಬಂದಿರುವ ಹಣ ಬಡ್ಡಿ ಸಮೇತ ಮರಳಿ ಪಡೆಯಲು ಸಂಪರ್ಕಿಸಿ.
ಹೊನ್ನೂರ ಸ್ವಾಮಿ ವಾಂಜ್ರೆ
87926 04196

**ಬೇಕಾಗಿದ್ದಾರೆ**
ಲಾಡ್ಜ್ ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ರೂಂ ಬಾಯ್ ಮತ್ತು ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
63639-54459

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ/ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ-1

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ವಯಸ್ಸು- 18 ರಿಂದ 26
ಸ್ಥಳ: ಜಗಳೂರು-7, ದಾವಣಗೆರೆ- 2
(ಅನುಭವವಿಲ್ಲದವರಿಗೂ ಆದ್ಯತೆ ನೀಡಲಾಗುವುದು)
84310 22744

**ಮನೆ ಬಾಡಿಗೆಗಿದೆ**
1st ಫ್ಲೋರ್‌ನಲ್ಲಿ 2BHK ಉತ್ತರ ದಿಕ್ಕಿನ ಮುಂಬಾಗಿಲುವುಳ್ಳ ಹಾಗೂ ಬೋರ್-ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗಿದೆ. ಮನೆ #651, ಶ್ರೀ ಕಟೀಲು, 6ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ.
ಮೊ.70194 27951, 93410 14488

**APARTMENT FOR SALE**
New 3 BHK Fully Furnished Apartment for sale SD Lotus, 3rd Main, 3rd Cross, SS Layout, B' Block, Davangere. Contact
98444 99799

**WANTED**
Anjum First Grade College
B.S. Nagar, Davangere-02.
Requires Lecturers to Teach in English Medium, Political Science-1, Commerce-1
97437 00743
97402 65935

**ಹೆಸರು ಬದಲಾವಣೆ**
ಶ್ರೀ ಸಂಗೇನಹಳ್ಳಿ ಜ್ಯೋತಿ, ಸಾ|| ಪುಣಭಘಟ್ಟ, ತಾ|| ಹರಪನಹಳ್ಳಿ, ಜಿ|| ವಿಜಯನಗರ ಆದ ನಾನು ನ್ಯಾಯಾಲಯದ ಮೂಲಕ (ಆದೇಶ ಸಂಖ್ಯೆ-O.S. no.153/2015) ನನ್ನ ಹೆಸರನ್ನು ಜ್ಯೋತಿಪ್ರಕಾಶ್ ಸಿ. ಎಸ್ ಎಂದು ಬದಲಾಯಿಸಿಕೊಂಡಿದ್ದು, ಇನ್ನು ಮುಂದೆ ನಾನು ಈ ಹೆಸರಿನಿಂದಲೇ ಗುರುತಿಸಿಕೊಳ್ಳುತ್ತೇನೆ.
ಜ್ಯೋತಿಪ್ರಕಾಶ್ ಸಿ.ಎಸ್

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಸ್ವಾಮಿ ವಿವೇಕಾನಂದ ಬಡಾವಣೆ, 7ನೇ ಮೇನ್‌ನಲ್ಲಿ, 2ನೇ ಮಹಡಿಯಲ್ಲಿ, 2BHK ಮನೆ ಬಾಡಿಗೆಗೆ ಇದೆ.
97432 43564

**ಮನೆ ಬಾಡಿಗೆ/ಮಾರಾಟಕ್ಕೆ ಇದೆ**
ಆಂಜನೇಯ ಬಡಾವಣೆ 2035/7, ನೆಲಮಹಡಿ ಗ್ರೌಂಡ್ ಫ್ಲೋರ್, ಉತ್ತರ ದಿಕ್ಕಿನ ಎಲ್ಲಾ ಸೌಲಭ್ಯವಿರುವ 2BHK ಮನೆ ಬಾಡಿಗೆಗೆ ಇದೆ. ಮತ್ತು ಗ್ರೌಂಡ್ ಫ್ಲೋರ್ 9sq, ಫಸ್ಟ್ ಫ್ಲೋರ್ 2 BHK /11Sq ಇರುವ ಮನೆ ಮಾರಾಟಕ್ಕೆ ಇದೆ. ವಿಚಾರಿಸಿ
98441 58279
81477 58354

**ಕೇವಲ ಅರ್ಧ ಪರ್ಸೆಂಟ್ ಕಮೀಷನ್‌ಗೆ ನಿಮ್ಮ ಸೈಟ್ ಸೇಲ್ ಮಾಡಿಸಿ ಕೊಡುತ್ತೇವೆ.**
63610 59489

**ಮನೆ ಮಾರಾಟಕ್ಕಿದೆ**
ಹರಿಹರದ ಲೇಬರ್ ಕಾಲೋನಿಯಲ್ಲಿ ಗೋಪಿ ಡಾಕ್ಟರೆ ಆಸ್ಪತ್ರೆಯ ಲೈನ್‌ನಲ್ಲಿ 25×40 ಸೈಜ್‌ನ RCC ಮನೆ ಮಾರಾಟಕ್ಕಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
98807 11232, 78920 64780

**WANTED TEACHERS**
Nursery Teachers - 2
BA/B.Sc/B.Com/B.Ed/D.Ed - 4
Aaya (Ladies) -2
Contact with originals
99801 48289
98807 43838

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ದಾವಣಗೆರೆ ನಗರ ಹಾಗೂ ಸುತ್ತ ಸೈಟುಗಳು ಹಾಗೂ ಮನೆಗಳು ಮಾರಾಟಕ್ಕಿವೆ. (20×30, 30×40, 30×50, 40×60). ಸಂಪರ್ಕಿಸಿ
97432 09680, 83101 50590

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana College Road, Vidyanagara, 2nd Main, Davangere
77603 16576
90080 55813

**ಬೇಕಾಗಿದ್ದಾರೆ**
ಜಗಳೂರಿನಲ್ಲಿರುವ ನಿರ್ಮಲ ನರ್ಸಿಂಗ್‌ನಲ್ಲಿ ಕೆಲಸ ನಿರ್ವಹಿಸಲು ಸ್ಟಾಫ್ ನರ್ಸ್ ಮತ್ತು ವಾಚ್ ಮನ್‌ಗಳು ಬೇಕಾಗಿದ್ದಾರೆ. ಮೆಡಿಕಲ್ ಶಾಪ್ ತಿಂಗಳ ಬಾಡಿಗೆಗೆ ದರದಲ್ಲಿ ಲಭ್ಯವಿದೆ. ಸಂಪರ್ಕಿಸಿ
81509 98213

**ಬೇಕಾಗಿದ್ದಾರೆ**
ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ 18 ರಿಂದ 35 ವರ್ಷದೊಳಗಿನವರು ಹಾಗೂ ಅನುಭವವುಳ್ಳವರು ಮಾತ್ರ ಸಂಪರ್ಕಿಸಿ.
ಮಣಿಕಂಠ ಏಜೆನ್ಸೀಸ್, ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
ಹರಿಹರ ಹತ್ತಿರ (1 ರಿಂದ 15 ಎಕರೆ) ಜಮೀನು ಕೊಳ್ಳಲು ಬೇಕಾಗಿರುತ್ತದೆ.
74112 50447

**ಮನೆ ಬೇಕಾಗಿದೆ**
ಹೊಳಲ್ಕೆರೆಯಲ್ಲಿ ನಮಗೆ ಬಾಡಿಗೆಗೆ ಮನೆ ಬೇಕಾಗಿದೆ. ಬ್ರೋಕರ್ಸ್‌ಗಳು ಅಥವಾ ಓನರ್‌ಗಳು
ಸಂಪರ್ಕಿಸಿ
70220 76255

**ಮನೆ ಬಾಡಿಗೆಗಿದೆ**
ಎರಡು ಬೆಡ್ ರೂಂ ಇರುವ ಮನೆ ಮೊದಲನೇ ಮಹಡಿಯಲ್ಲಿ ಎಂ.ಸಿ.ಸಿ ಬಿ ಬ್ಲಾಕ್‌ನಲ್ಲಿ ಗೀತಾಂಜಲಿ ನಿವಾಸ, ಡೋರ್ ನಂ.4421, BIET ಕಾಲೇಜ್ ರೋಡ್ 8ನೇ ಕ್ರಾಸ್, ವಿನಾಯಕ ಕ್ಲಿನಿಕ್ ಪೂರ್ವಕ್ಕೆ.
98806 47830, 63628 47140

**ಮನೆ ಬಾಡಿಗೆಗೆ ಇದೆ**
ನಗರದ ಹೆಚ್.ಎಂ. ರಸ್ತೆಯಲ್ಲಿರುವ (ಬಿನ್ನಿ ಕಂಪನಿ ರಸ್ತೆ) ಚೈತ್ರ ಪ್ರಿಂಟರ್ಸ್‌ನ ಹಿಂಭಾಗ ಹಾಗೂ ಮೇಲುಗಡೆ ಎರಡು ಮನೆಗಳು ಬಾಡಿಗೆಗೆ ಇರುತ್ತವೆ.
ಸಂಪರ್ಕಿಸಿ
99456 11742

**ಅರೋಮಾ ಹೋಟೆಲ್ಸ್**
ಡಾಬಾದಲ್ಲಿ ವೆಜ್ - ನಾನ್ ವೆಜ್ ಅಡುಗೆ ಮಾಡಲು ಅನುಭವಿ ಅಡುಗೆ ಭಟ್ಟರು ಬೇಕಾಗಿದ್ದಾರೆ.
78999 66636
79756 25698

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ROOM FOR RENT/LEASE**
A Room with attached Both Room with all facilities (Cot, fan, Lights, Hot water, 24 Hours water supply) is for rent / lease @vidya nagar, 1st bus stop.
Contact: 63615 93954

**ಜೀವ ಸಂಜೀವಿನಿ**
ಮಲ್ಟಿಗ್ರೇನ್ ಹೆಲ್ತ್ ಮಿಕ್ಸ್ ಫಾರ್ಮುಲಾ ಆಹಾರದಿಂದ ಮರಳಿ ಆರೋಗ್ಯದೆಡೆಗೆ ಕನಿಷ್ಠ ಬೆಳಗಿನ ತಿಂಡಿಯ ಬದಲಾಗಿ ಇದನ್ನು100 ದಿನಗಳ ಕಾಲ ಉಪಯೋಗಿಸಿದಲ್ಲಿ ಆರೋಗ್ಯದ ಸಂಪೂರ್ಣ ಲಾಭ ಪಡೆಯಬಹುದು. ಮಾಹಿತಿಗಾಗಿ ಅಥವಾ ಮಲ್ಟಿಗ್ರೇನ್ ಪೌಡರ್ ಬೇಕಾದಲ್ಲಿ ಸಂಪರ್ಕಿಸಿ : ಪ್ರಸನ್ನ ಸ್ವಾಮಿ :
80739 52842

**ಬೇಕಾಗಿದ್ದಾರೆ**
Food ಮಾರ್ಟ್‌ನಲ್ಲಿ ಕೆಲಸ ಮಾಡಲು ಯುವಕ/ಯುವತಿ ಬೇಕಾಗಿದ್ದಾರೆ. ಸಮಯ: ಬೆಳಗ್ಗೆ 8 ರಿಂದ ರಾತ್ರಿ 8ರ ವರೆಗೆ. ಸಂಬಳ: 10,000 ರೂ.
90089 85112

**ಸೈಟ್ ಮಾರಾಟಕ್ಕಿದೆ**
ಬನಶಂಕರಿ ಬಡಾವಣೆ 30×50 ಪಶ್ಚಿಮ, ತರಳಬಾಳು ಬಡಾವಣೆ 50×75 ಪೂರ್ವ, ದಾವಣಗೆರೆ.
86181 82332

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ: ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ವಿಜಯ ಪ್ಯಾರಾ ಮೆಡಿಕಲ್ ಕಾಲೇಜು ಪ್ರವೇಶ-2021-22**
ಕೆಲವೇ ಸೀಟುಗಳು ಲಭ್ಯ ಕಡಿಮೆ ಶುಲ್ಕ 10,500/- Lab Technician, (DMLT), Health Inspector (DHI), X-ray Technician (DMIT). Adress: D.C.M Township Near Hanumathappa Park, Davangere.
80737 43581, 77601 55550

**ವಾಹ್ ಕಾಫಿ !! ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ನ್ಯೂರೋಥೆರಪಿ ಚಿಕಿತ್ಸೆ 100% ಔಷಧಿರಹಿತ/ನಿಶ್ಚಿತ ಪರಿಹಾರ**
ಡಿಪ್ರೆಶನ್, ಗ್ಯಾಸ್ಟ್ರೈಟಿಸ್, ನಿದ್ರಾಹೀನತೆ, ಬಿಪಿ/ಶುಗರ್, ನರದೌರ್ಬಲ್ಯ ಕಾಯಿಲೆಗಳಿಗೆ 100% ಪರಿಹಾರ. ಇಂದೇ ಸಂಪರ್ಕಿಸಿ :
# ನ್ಯೂರೋಥೆರಪಿ ವೆಲ್‌ನೆಸ್ ಸೆಂಟರ್
3ನೇ ಮೇನ್, 2ನೇ ಕ್ರಾಸ್, ಎಂ.ಸಿ.ಸಿ. ಬಿ ಬ್ಲಾಕ್, ಸುರಂಭಿ ಹಾಸ್ಪಿಟಲ್ ಹತ್ತಿರ, ದಾವಣಗೆರೆ. ಫೋ.: 99726 00713

**WANTED**
Teaching & non teaching Art's/ Commerce. Science (PCMB) diploma. & BE, Davangere.
85532 78258

**ಅಣಬೆಗಳು ದೊರೆಯುತ್ತವೆ**
ಡಿ.ಸಿ.ಎಂ ಟೌನ್ ಶಿಪ್‌ನಲ್ಲಿ ಅಣಬೆಗಳು ದೊರೆಯುತ್ತವೆ.
ಸಂಪರ್ಕಿಸಿ
08192- 255433

# 'ನಮ್ಮ ಕೆರೆಗಳು ಸಾಂಪ್ರದಾಯಿಕ ಜಲಕನ್ನಡಿಗಳು' ಕೃತಿ ಇಂದು ಬಿಡುಗಡೆ

ದಾವಣಗೆರೆ, ನ.4- ನಾಳೆ ದಿನಾಂಕ 7ರ ಭಾನುವಾರ ಬೆಳಿಗ್ಗೆ 10.30ಕ್ಕೆ ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ ಸಾಹಿತಿ ಬಸವರಾಜ ಕುಂಚೂರು ರಚಿತ 'ನಮ್ಮ ಕೆರೆಗಳು ಸಾಂಪ್ರದಾಯಿಕ ಜಲಕನ್ನಡಿಗಳು' ಕೃತಿ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನಿವೃತ್ತ ಶಿಕ್ಷಕ ಕೆ.ಸಿ. ಲೋಕೇಶ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಹಿರಿಯ ಸಾಹಿತಿ ಪ್ರೊ. ಎಸ್.ಬಿ. ರಂಗನಾಥ್ ಕೃತಿ ಬಿಡುಗಡೆ ಮಾಡಲಿದ್ದಾರೆ. ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ ಮುಖ್ಯಸ್ಥೆ ಜಸ್ಟಿನ್ ಡಿಸೌಜ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಗಳೂರು ಮಾಜಿ ಶಾಸಕ ಗುರುಸಿದ್ಧನಗೌಡ್ರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ರವಿಚಂದ್ರ ಭಾಗವಹಿಸುವರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆರೆಗಳ ಕುರಿತು ವಿಚಾರ ಸಂಕಿರಣ ನಡೆಯಲಿದ್ದು, ಜನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಅವರು 'ಜಾನಪದದಲ್ಲಿ ಕೆರೆಗಳು', ಪತ್ರಕರ್ತ ಬಿ.ಎನ್. ಮಲ್ಲೇಶ್ 'ಕೆರೆಗಳ ಅಳಿವುಳಿವು', ಸಾಹಿತಿ ಡಾ. ಮಲ್ಲಿಕಾರ್ಜುನ್ 'ಇತಿಹಾಸದ ಕಣ್ಣಲ್ಲಿ ಕೆರೆಗಳು', ಸಾಹಿತಿ ಶಾಂತಗಂಗಾಧರ 'ದಾವಣಗೆರೆ ಜಿಲ್ಲೆಯ ಕೆರೆಗಳು', ಸಾಹಿತಿ ಡಾ. ಬುರುಡೇ ಕಟ್ಟೆ ಮಂಜಪ್ಪ 'ಲೇಖಕ ಬಸವರಾಜ ಕುಂಚೂರು ಕುರಿತು ಹಾಗೂ ಸಾಹಿತಿ ಮಂಗಳ ಅವರು 'ಕೆರೆ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ' ಕುರಿತು ವಿಚಾರ ಮಂಡಿಸಲಿದ್ದಾರೆ.

ವಿಚಾರ ಸಂಕಿರಣದಲ್ಲಿ ದಿ. ಡಾ. ಮಂಜುನಾಥಗೌಡರ ಪತ್ನಿ ಮಂಜುಳ, ಕಸಾಪ ನಿಕಟಪೂರ್ವ ಜಿಲ್ಲಾಧ್ಯಕ್ಷ ಮಂಜುನಾಥ ಕುರ್ಕಿ, ಕಸಾಪ ಮಾಜಿ ತಾಲ್ಲೂಕಾಧ್ಯಕ್ಷ ಬಿ. ವಾಮದೇವಪ್ಪ, ಸಾಹಿತಿ ಹಿ.ಗೂ. ದುಂಡ್ಯಪ್ಪ, ಮಹಾನಗರ ಪಾಲಿಕೆ ಸದಸ್ಯ ಎಸ್. ಬಿ. ರುದ್ರಗೌಡ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಲೇಖಕ ಬಸವರಾಜ ಕುಂಚೂರು ಮಾತನಾಡಿ, ಬಿಡುಗಡೆಯಾಗುತ್ತಿರುವ ಕೃತಿಯಲ್ಲಿ ಜಿಲ್ಲೆಯ 400ಕ್ಕೂ ಹೆಚ್ಚು ಕೆರೆಗಳ ಕುರಿತ ಸಮಗ್ರ ಮಾಹಿತಿ ಇರುವುದಾಗಿ ಹೇಳಿದರು.

ಈ.ತಿಪ್ಪೇಸ್ವಾಮಿ, ಪುಷ್ಪರಾಜ್, ಚನ್ನವೀರಪ್ಪ, ಟಿ. ಕರಿಬಸಪ್ಪ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಬೆಳಕು ಅರಿವಿನ ಮೂಲ : ರಂಭಾಪುರಿ ಜಗದ್ಗುರುಗಳು



ಚನ್ನಗಿರಿ ನ.6 - ದೀಪದಲ್ಲಿ ಬೆಂಕಿ, ಬೆಳಕು ಎರಡೂ ಇವೆ. ದೀಪದಲ್ಲಿ ಬೆಳಕು ಕಾಣಬೇಕಲ್ಲದೆ ಬೆಂಕಿ ಕಾಣಬಾರದು. ಬೆಳಕು ಜ್ಞಾನದ ಅರಿವಿಗೆ ಮೂಲವೆಂದು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲ್ಲೂಕಿನ ದೊಡ್ಡಬ್ಬೀಗೆರೆಯಲ್ಲಿ ಜರುಗಿದ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಹೊರಗಿನ ಕತ್ತಲೆಯನ್ನು ಸೂರ್ಯ ಕಳೆಯಬಲ್ಲ. ಒಳಗಿರುವ ಅಜ್ಞಾನ ಎಂಬ ಕತ್ತಲೆಯನ್ನು ಗುರು ಕಳೆಯಬಲ್ಲ. ಶಿವ ಪಥವನರಿಯಲು ಗುರು ಪಥ ಮೊದಲು ಎಂಬುದನ್ನು ಮರೆಯಬಾರದು. ಸಂಸ್ಕಾರ, ಸಂಸ್ಕೃತಿ, ಸದಾಚಾರದಿಂದ ಬದುಕು ಉಜ್ವಲಗೊಳ್ಳಲು ಸಾಧ್ಯವಾಗುತ್ತದೆ. ದೇವರು ಧರ್ಮ ಮತ್ತು ಗುರುವಿನಲ್ಲಿ ನಂಬಿಕೆ ವಿಶ್ವಾಸವನ್ನು ಎಂದಿಗೂ ಕಳೆದುಕೊಳ್ಳಬಾರದು. ಕ್ಷಣಿಕ ಸುಖಕ್ಕಾಗಿ ಶಾಶ್ವತವಾಗಿ ಫಲ ಕೊಡುವ ಮೌಲ್ಯಗಳನ್ನು ನಿರ್ಲಕ್ಷಿಸಬಾರದು. ಮನುಷ್ಯನಲ್ಲಿ ವೈಚಾರಿಕತೆ ಸುಧಾರಣೆ ಬೆಳೆದು ಬರಲಿ. ಆದರೆ ನಾಸ್ತಿಕ ಮನೋಭಾವ ಯಾವತ್ತೂ ಬೆಳೆಯಬಾರದು. ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಮೌಲ್ಯಾಧಾರಿತ ಜೀವನ ದರ್ಶನ ಸಿದ್ಧಾಂತವನ್ನು ಅರಿಯುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಬೆಳೆಯುವ ಯುವ ಜನಾಂಗದಲ್ಲಿ ಸಂಸ್ಕಾರ, ಸದ್ವಿಚಾರ, ಕರ್ತವ್ಯಶೀಲತೆ, ಪ್ರಾಮಾಣಿಕತೆ ಮತ್ತು ದೇಶಾಭಿಮಾನ ಬೆಳೆಸುವ ಮಹತ್ಕಾರ್ಯವಾಗಬೇಕು. ದೊಡ್ಡಬ್ಬೀಗೆರೆ ಸಮಸ್ತ ಜನರು ಭಕ್ತಿ ಶ್ರದ್ಧೆಯಿಂದ ಎರಡನೇ ಸಲ ಬರಮಾಡಿಕೊಂಡು ಧರ್ಮ ಸಮಾರಂಭ ನಡೆಸುತ್ತಿರುವುದು ತಮಗೆ ಸಂತಸ ತಂದಿದೆ ಎಂದರು.

ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರು ಮಾತನಾಡಿ, ಸತ್ಯ ಸಂಸ್ಕೃತಿ ಬೆಳೆದುಕೊಂಡು ಬರಬೇಕಾಗಿದೆ. ಸರ್ವ ಜನಾಂಗದ ಶಾಂತಿಯ ತೋಟದಂತಿರುವ ಈ ನಾಡಿನಲ್ಲಿ ಎಲ್ಲರೂ ಸಾಮರಸ್ಯದಿಂದ ಸುಂದರ ಬದುಕು ಕಟ್ಟಿಕೊಳ್ಳಬೇಕಾಗಿದೆ. ಮಾನವ ಧರ್ಮಕ್ಕೆ ಜಯವಾಗಲಿ ಎಂದ ಶ್ರೀ ರಂಭಾಪುರಿ ಜಗದ್ಗುರುಗಳವರ ವಿಶಾಲ ಸಂದೇಶ, ಸೌಹಾರ್ದತೆ ಮತ್ತು ಬೆಳವಣಿಗೆಗೆ ಸಹಕಾರಿಯಾಗಿದೆ ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಎನ್. ಬಿ.ಶಿವಮೂರ್ತಿ ಧರ್ಮ ಸಮಾರಂಭವನ್ನು ಉದ್ಘಾಟಿಸಿದರು. ನೇತೃತ್ವ ವಹಿಸಿದ್ದ ಮಳಲಿ ಸಂಸ್ಥಾನ ಮಠದ ಡಾ|| ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜೀವನ ಉನ್ನತಿಗೆ ಧರ್ಮಾಚರಣೆ ಅಗತ್ಯ. ಅಧ್ಯಾತ್ಮದ ಅರಿವು, ಆಚರಣೆಯಿಂದ ಜೀವನ ಉಜ್ವಲಗೊಳ್ಳಲು ಸಾಧ್ಯ. ಗುರಿ ಮತ್ತು ಗುರುವಿನ ಮೂಲಕ ಜೀವನದಲ್ಲಿ ಶ್ರೇಯಸ್ಸನ್ನು ಕಾಣಬೇಕೆಂದರು.

ಮುಖ್ಯ ಅತಿಥಿಗಳಾಗಿ ಎಂ.ಎಸ್. ಧರ್ಮಯ್ಯ, ಗ್ರಾ.ಪಂ.ಅಧ್ಯಕ್ಷರಾದ ಎ. ಪರಿಮಳ, ಉಪಾಧ್ಯಕ್ಷರಾದ ಸವಿತ, ಗ್ರಾ.ಪಂ. ಸದಸ್ಯರಾದ ಎ. ಯತೀಶ್, ಗಿರೀಶ್, ವೆಂಕಟೇಶ್, ಜೆ. ಅನಿತ, ಮಾಗೇಶ, ಅಂಜನಮ್ಮ ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರು ರಕ್ಷೆ ಪಡೆದರು.

# ಅಭಿವೃದ್ಧಿ ಕಾಮಗಾರಿಗೆ ಎಸ್ಸೆಸ್‌ರಿಂದ ಭೂಮಿ ಪೂಜೆ



ದಾವಣಗೆರೆ, ನ.6- ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಮತ್ತು ಲೋಕೋಪಯೋಗಿ ಇಲಾಖೆಯ ಲೆಕ್ಕ ಶೀರ್ಷಿಕೆಯ 8433ರ ಯೋಜನೆಯಡಿ 136 ಲಕ್ಷ ವೆಚ್ಚದಲ್ಲಿ ನಗರ ಪಾಲಿಕೆ ವ್ಯಾಪ್ತಿಯ ಮಾಗಾನಹಳ್ಳಿ ರಸ್ತೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ನಿರ್ಮಾಣಕ್ಕೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಭೂಮಿ ಪೂಜೆ ನೆರವೇರಿಸಿದರು.

12 ಲಕ್ಷ ರೂ. ವೆಚ್ಚದಲ್ಲಿ ವಾರ್ಡ್ ನಂ. 9ರ ವ್ಯಾಪ್ತಿಯಲ್ಲಿ ಆಜಾದ್ ನಗರ 6ನೇ ಕ್ರಾಸ್‌ನಿಂದ ಭಾಷಾನಗರ ಸರ್ಕಲ್‌ವರೆಗೆ ರಸ್ತೆ ಬದಿ ಚರಂಡಿ ನಿರ್ಮಾಣ ಹಾಗೂ 12.86 ಲಕ್ಷ ರೂ ವೆಚ್ಚದಲ್ಲಿ ವಾರ್ಡ್‌ನಂ.12ರ ವ್ಯಾಪ್ತಿಯ ಆಜಾದ್ ನಗರ 11ನೇ ಕ್ರಾಸ್‌ನಲ್ಲಿ ರಸ್ತೆ ಬದಿಯಲ್ಲಿ ಸಿ.ಸಿ. ಪೈಪ್ ಚರಂಡಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಮಹಾನಗರ ಪಾಲಿಕೆ ಸದಸ್ಯರುಗಳಾದ ಜಾಕೀರ್, ಶ್ರೀಮತಿ ಉರ್‌ಬಾನು, ರಹೀಂಸಾಬ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಶಿವರಾಜ್, ಪ್ರಾಂಶುಪಾಲರುಗಳಾದ ಸುರೇಶ್, ಸೈಯದ್ ಮುಜೀಬುಲ್ಲಾ, ಮುಖಂಡರುಗಳಾದ ಶಫೀಕ್ ಪಂಡಿತ್, ಹೆಚ್.ಜಯಣ್ಣ, ನೂರ್ ಅಹ್ಮದ್, ಮುನೀರ್ ಸಾಬ್, ಷೇಕ್ ಅಹ್ಮದ್, ಲೋಕೋಪಯೋಗಿ ಇಲಾಖೆಯ ಮಹಾದೇವಪ್ಪ, ಮಲ್ಲೇಶಪ್ಪ, ಕೆಐಡಿಬಿಯ ಗಣೇಶಬಾಬು, ಸ್ಮಾರ್ಟ್‌ಸಿಟಿ ನಿರ್ದೇಶಕ ಎಂ. ನಾಗರಾಜ್ ಸೇರಿದಂತೆ ಇತರರು ಇದ್ದರು.

# ಲಸಿಕೆಯಿಂದ ಜೀವಕ್ಕೆ ತೊಂದರೆ ಇಲ್ಲ, ಅಪಪ್ರಚಾರ ನಂಬಬೇಡಿ



## ಹರಪನಹಳ್ಳಿ : ಕೊರೊನಾ ವಾರಿಯರ್ಸ್‌ಗೆ ಅಭಿನಂದನಾ ಸಮಾರಂಭದಲ್ಲಿ ಸಂಸದ ಸಿದ್ದೇಶ್ವರ

ಹರಪನಹಳ್ಳಿ, ನ.6- ಲಸಿಕೆ ಹಾಕಿಸಿಕೊಳ್ಳುವುದರಿಂದ ಜೀವಕ್ಕೇನು ತೊಂದರೆ ಇಲ್ಲ, ಅಪಪ್ರಚಾರ ನಂಬಬೇಡಿ, ಎಷ್ಟು ಲಸಿಕೆ ಬೇಕಾದರೂ ತರಿಸಿಕೊಡುತ್ತೇವೆ. ಪ್ರತಿಯೊಬ್ಬರೂ ಲಸಿಕೆ ಹಾಕಿಸಿಕೊಳ್ಳಿ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕೊರೊನಾ ವಾರಿಯರ್ಸ್‌ಗಳಿಗೆ ಅಭಿನಂದನಾ ಹಾಗೂ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಅಪಪ್ರಚಾರ ನಂಬದೇ ಮುಸ್ಲಿಂ ಬಾಂಧವರು ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು. ದೇಶದಲ್ಲಿ 100 ಕೋಟಿ ಜನರಿಗೂ ಲಸಿಕೆ ಹಾಕಲಾಗಿದೆ. ಪ್ರಪಂಚದಲ್ಲಿಯೇ ಅತಿ ಹೆಚ್ಚು ಲಸಿಕೆ ಹಾಕಿದ ದೇಶ ಭಾರತ, ಅದು ಪ್ರಧಾನಿ ಮೋದಿಯವರ ಹೆಗ್ಗಳಿಕೆ ಎಂದರು.

ಶಾಸಕ ಜಿ.ಕರುಣಾಕರ ರೆಡ್ಡಿ ಮಾತನಾಡಿ, ವೈದ್ಯೋ ನಾರಾಯಣ ಹರಿ ಎನ್ನುತ್ತಾರೆ. ಆದ್ದರಿಂದ ರೋಗಿಗಳಿಗೆ ಪ್ರೀತಿ, ವಿಶ್ವಾಸದಿಂದ ಚಿಕಿತ್ಸೆ ನೀಡಬೇಕು. ಕೊರೊನಾ ಸಂದರ್ಭದಲ್ಲಿ ಉತ್ತಮ ಸೇವೆ ಸಲ್ಲಿಸಿದ್ದೀರಿ. ಮುಂದೆಯೂ ಶಕ್ತಿ ಮೀರಿ ಜನರ ಸೇವೆ ಸಲ್ಲಿಸಿ ಎಂದು ಹೇಳಿದರು.

ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿ, ಅವರ ನಟನೆಯ ಜೊತೆಗೆ ಸಾಮಾಜಿಕ ಸೇವಾ ಕಾರ್ಯ ಮಾಡಿರುವುದು ಶ್ಲಾಘನೀಯ ಹಾಗೂ ಅವರ ನಿಧನದಿಂದ ಅತೀವ ನೋವಾಗಿದೆ ಎಂದು ಹೇಳಿದರು.

ಕೋವಿಡ್‌ನಿಂದ ಅಭಿವೃದ್ಧಿ ಕುಂಠಿತಗೊಂಡಿಲ್ಲ ಹಾಗೂ ಸಹೋದರ ಜನಾರ್ದನ ರೆಡ್ಡಿ ಅವರ ರಾಜಕೀಯ ಜೀವನದ ಬಗ್ಗೆ ಅವರೇ ತೀರ್ಮಾನ ಮಾಡಬೇಕು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಕಲ್ಯಾಣ ಕರ್ನಾಟಕ ಯೋಜನೆಯಲ್ಲಿ ನೀಡುವ ಅನುದಾನದಲ್ಲಿ ವಿಜಯನಗರ ಜಿಲ್ಲೆಗೆ ತಾರತಮ್ಯವಾಗುತ್ತಿಲ್ಲ ಎಂದು ಹೇಳಿದರು. ತಾಲ್ಲೂಕಿನಲ್ಲಿ ಕೆರೆಗಳಿಗೆ ನದಿ ನೀರು, ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜ್ ಯೋಜನೆ ಪ್ರಗತಿಯಲ್ಲಿದೆ ಎಂದರು.

ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಶಿವಕುಮಾರ್ ಮಾತನಾಡಿ, ಕೋವಿಡ್ ಲಸಿಕೆ ಹಾಕುವ ಕಾರ್ಯ ಶೇ.80 ರಷ್ಟು ಆಗಿದೆ. ಇನ್ನೂ 20 ರಷ್ಟು ಇದೆ. ಎಲ್ಲರೂ ಸಹಕಾರ ನೀಡಬೇಕು ಎಂದು ತಿಳಿಸಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ತಹಶೀಲ್ದಾರ್ ಎಲ್.ಎಂ.ನಂದೀಶ್, ಪುರಸಭಾ ಅಧ್ಯಕ್ಷ ಮಂಜುನಾಥ್ ಇಜಂತಕರ್, ಉಪಾಧ್ಯಕ್ಷೆ ನಿಟ್ಟೂರು ಭೀಮವ್ವ ಸಣ್ಣಹಾಲಪ್ಪ, ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಪುರಸಭಾ ಸದಸ್ಯರುಗಳಾದ ಕಿರಣ್ ಶಾನ್ ಬಾಗ್, ಡಿ.ರೊಕ್ಕಪ್ಪ, ತಾರಾ ಹನುಮಂತಪ್ಪ, ಸುಮಾ ವಾಗೀಶ್, ಜಾವೀದ್, ಸಿಪಿಐ ನಾಗರಾಜ್ ಕಮ್ಮಾರ, ಪಿಎಸ್‌ಐ ಸಿ.ಪ್ರಕಾಶ್, ಟಿಹೆಚ್‌ಓ ದೇವರಾಜ್, ಮೆಡಿಕಲ್ ತಿಮ್ಮಣ್ಣ, ರಾಘವೇಂದ್ರ ಶೆಟ್ಟಿ, ಯು.ಪಿ.ನಾಗರಾಜ್, ಬಸವರಾಜ್ ಇತರರಿದ್ದರು.

# ಗೋಪನಾಳ್‌ನಲ್ಲಿ ಸಾಹಿತ್ಯ ಪರಿಷತ್‌ನ ಚುನಾವಣಾ ಪ್ರಚಾರ



ದಾವಣಗೆರೆ, ನ.6- ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸ್ಥಾನದ ಅಭ್ಯರ್ಥಿ ಬಿ.ವಾಮದೇವಪ್ಪ ಮತ್ತು ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ ಶೇಖರಗೌಡ ಮಾಲಿ ಪಾಟೀಲ್ ಅವರ ಪರವಾಗಿ ತಾಲ್ಲೂಕಿನ ಗೋಪನಾಳ್ ಗ್ರಾಮದಲ್ಲಿ ಬಿರುಸಿನ ಚುನಾವಣಾ ಪ್ರಚಾರ ನಡೆಸಲಾಯಿತು.

ಸಾಹಿತ್ಯ ಪರಿಷತ್ತಿನ ಸದಾ ಒಡನಾಡಿಗಳು, ಸಾಹಿತ್ಯ ಪರಿಷತ್ ಚಟುವಟಿಕೆಗಳ ಅಭಿವೃದ್ಧಿಗಾಗಿ ಸದಾ ಶ್ರಮಿಸುತ್ತಾ ಬಂದಿರುವ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತನ್ನು ಅತ್ಯಂತ ಆದರ್ಶವಾಗಿ ಬಹುತೇಕ ಹಳ್ಳಿಗಳಿಗೆ ನಗರದ ಶಾಲಾ - ಕಾಲೇಜುಗಳಲ್ಲಿ ಅರ್ಥಪೂರ್ಣ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಪರಿಚಯಿಸಿಕೊಡುವಂತಹ ಕೆಲಸವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನದ ಚುನಾವಣಾ ಅಭ್ಯರ್ಥಿ ಬಿ.ವಾಮದೇವಪ್ಪ ಮಾಡಿರುತ್ತಾರೆ.

ವಾಮದೇವಪ್ಪ ಅವರಿಗೆ ಮತ ನೀಡಿ, ರಾಜ್ಯದಲ್ಲಿಯೇ ಹೆಚ್ಚು ಅಂತರದಿಂದ ಗೆದ್ದ ಅಭ್ಯರ್ಥಿ ಎಂಬ ಇತಿಹಾಸ ದಾಖಲೆಯನ್ನು ನಿರ್ಮಿಸ ಬೇಕೆಂದು ಡಿಸಿಸಿ ಬ್ಯಾಂಕ್ ಸದಸ್ಯ ಹೆಚ್.ಕೆ. ಪಾಲಾಕ್ಷಪ್ಪ ಅವರು ಮತದಾರರಲ್ಲಿ ವಿನಂತಿಸಿಕೊಂಡರು.

ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿಗೆ ಸ್ಪರ್ಧಿಸಿರುವ ಶೇಖರಗೌಡ ಮಾಲಿ ಪಾಟೀಲ್‌ರವರು ಅತ್ಯಂತ ಸರಳ, ಸಜ್ಜನಿಕೆಯ, ಸಹಕಾರಿ ಕ್ಷೇತ್ರದ ಧುರೀಣರು, ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಎರಡು ಅವಧಿಗೆ ಜಿಲ್ಲಾ ಅಧ್ಯಕ್ಷರಾಗಿದ್ದವರು, ಗಂಗಾವತಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ಇದೆ ಎಂದು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ ಅವರು ಮತದಾರರಿಗೆ ಮನವರಿಕೆ ಮಾಡಿಕೊಟ್ಟರು.

ದಾವಣಗೆರೆ ಜಿಲ್ಲೆಗೆ ಬಿ. ವಾಮದೇವಪ್ಪ ಅವರನ್ನು, ರಾಜ್ಯಕ್ಕೆ ಶೇಖರಗೌಡ ಮಾಲಿ ಪಾಟೀಲ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು ಬೆಂಬಲಿಸುವಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎ. ಆರ್. ಉಜ್ಜನಪ್ಪ ಮನವಿ ಮಾಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನದ ಚುನಾವಣಾ ಅಭ್ಯರ್ಥಿ ಬಿ. ವಾಮದೇವಪ್ಪ ಅವರು ಮಾತನಾಡಿ, ಜಿಲ್ಲೆಯಾದ್ಯಂತ ಬಹುತೇಕ ಆಜೀವ ಸದಸ್ಯರುಗಳ ಒಲವು ನನ್ನ ಪರವಾಗಿದೆ ಎಂದು ತಿಳಿಸುತ್ತಾ, ಮುಂದಿನ ದಿನಮಾನಗಳಲ್ಲಿ ತಮ್ಮೆಲ್ಲರ ಆಶಯದಂತೆ ಪ್ರಾಮಾಣಿಕವಾಗಿ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳನ್ನು ರೂಪಿಸುತ್ತೇನೆ ಎಂಬ ಸಂಕಲ್ಪದ ನುಡಿಗಳನ್ನಾಡಿದರು.

ನಗರಪಾಲಿಕೆಯ ಸದಸ್ಯರಾಗಿದ್ದ ಎಸ್.ಬಿ. ರುದ್ರಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಕಾರ್ಯದರ್ಶಿಯೂ ಆದ ಜಿಲ್ಲಾ ಆಡಳಿತದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಿ.ದಿಳ್ಯಪ್ಪ ಮಾತನಾಡಿದರು.

# ನಗರದಲ್ಲಿ ಇಂದು ಶ್ರೀ ಗಾಯತ್ರಿ ಪರಿವಾರದ ಸಭೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಅಧ್ಯಾತ್ಮ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಇಂದು ಸಂಜೆ 5 ಗಂಟೆಗೆ ಪರಿವಾರದ ಕಛೇರಿಯ ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್‌ಶೆಣೈ ತಿಳಿಸಿದ್ದಾರೆ.

# ಅಧಿಕಾರಿಗಳ ಸಹಿತ ರಾತ್ರಿಯೂ ಕಾಮಗಾರಿ ವೀಕ್ಷಿಸಿದ ಮೇಯರ್



ದಾವಣಗೆರೆ, ನ.6- ನಗರದಲ್ಲಿ ಕಾಮಗಾರಿಗಳು ನಡೆಯುತ್ತಿರುವ ಕೆಲವು ಸ್ಥಳಗಳಿಗೆ ಇಂದು ರಾತ್ರಿ ಅಧಿಕಾರಿಗಳ ತಂಡದೊಂದಿಗೆ ಭೇಟಿ ನೀಡಿ, ಪರಿಶೀಲಿಸಿದ ನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಅವರು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಲಹೆ, ಸೂಚನೆ ನೀಡಿದರು.

ವಿಜಯಲಕ್ಷ್ಮಿ ರಸ್ತೆಯಲ್ಲಿ ನಡೆಯುತ್ತಿರುವ ರಾಜ ಕಾಲುವೆ ಕಾಮಗಾರಿ ವೀಕ್ಷಿಸಿ, ಸ್ಮಾರ್ಟ್ ಸಿಟಿ ಇಂಜಿನಿಯರ್‌ಗೆ ಕರೆ ಮಾಡಿ ಶೀಘ್ರ ಕಾಮಗಾರಿ ಪೂರ್ಣಗೊಳಿಸಲು ತಾಕೀತು ಮಾಡಿದರು. ಅಲ್ಲದೇ, ದೊಡ್ಡ ಪೇಟೆ ವಿರಕ್ತ ಮಠದ ಎದುರು ಬೀದಿ ದೀಪದ ಕಂಬ ಇಲ್ಲದಿರುವುದಕ್ಕೆ ಅದನ್ನು ಅಳವಡಿಸಲು ಸೂಚಿಸಿದರು.

ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯ ಸ್ವಾಗಿ ಶಾಂತಕುಮಾರ್, ಮಾಜಿ ಸದಸ್ಯ ಶಿವನಗೌಡ ಟಿ. ಪಾಟೀಲ್, ಎಸ್.ಸಿ. ಉದಯಕುಮಾರ್, ಪಾಲಿಕೆ ಅಧಿಕಾರಿಗಳಾದ ಕಿರಣ ಕುಮಾರ್, ಯುಸೂಫ್, ಸುನಿಲ್ ಸೇರಿದಂತೆ, ಇತರರು ಇದ್ದರು.

# ಪಾಲಿಗೆ ಕಣ್ತೆರೆದು ನೋಡುವುದು ಯಾವಾಗ ?



ದಾವಣಗೆರೆ, ನ.6- ಸ್ಮಾರ್ಟ್ ಸಿಟಿ ದಾವಣಗೆರೆಯ ಮಧ್ಯಭಾಗದಲ್ಲಿರುವ ಜಯದೇವ ವೃತ್ತದಲ್ಲಿ ಹೈಮಾಸ್ಕ್ ದೀಪ ನೆಪ ಮಾತ್ರಕ್ಕೆ ಇದ್ದು, ಸಾರ್ವಜನಿಕರಿಗೆ ಮಾತ್ರ ಯಾವುದೇ ರೀತಿಯ ಅನುಕೂಲವಾಗುತ್ತಿಲ್ಲ. ಜಯದೇವ ಸರ್ಕಲ್‌ನಿಂದ ಹದಡಿ ರಸ್ತೆಯವರೆಗೆ ಬೀದಿ ದೀಪಗಳು ಕಣ್ಣಾ ಮುಚ್ಚಾಲೆಯಾಡುತ್ತಿವೆ.

ನಗರದ ಮಧ್ಯ ಭಾಗದಲ್ಲಿನ ಸ್ಥಿತಿ ಹೀಗಾದರೆ ಬೇರೆ ಕಡೆಯ ಪರಿಸ್ಥಿತಿ ಯೋಚಿಸಲು ಅಸಾಧ್ಯ.

ಪಾಲಿಕೆ ಮಾತ್ರ ಇದರ ಬಗ್ಗೆ ಗಮನ ಹರಿಸದೆ ನೋಡಿಯೂ ನೋಡದಂತೆ ಇರುವುದು ವಿಪರ್ಯಾಸ ಎಂದು ಕೆಪಿಸಿಸಿ ಸಾಮಾಜಿಕ ಜಾಲತಾಣದ ಕೆ.ಎಲ್. ಹರೀಶ್ ಬಸಾಪುರ ಬೇಸರ ವ್ಯಕ್ತಪಡಿಸಿದ್ದಾರೆ.

# ನಗರದಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ದಾವಣಗೆರೆ, ನ.6- ಎಸ್. ಎಸ್. ಲೇಔಟ್ 'ಎ' ಬ್ಲಾಕ್, ಅಥಣಿ ಕಾಲೇಜು, ಎಂ.ಬಿ.ಎ. ಕಾಲೇಜು, ಶಾರದಾಂಬ ಸರ್ಕಲ್‌ನಿಂದ ಕುಂದುವಾಡ ಕೆರೆ ರಸ್ತೆ ಸುತ್ತ ಮುತ್ತ ಪ್ರದೇಶಗಳಲ್ಲಿ ನಾಡಿದ್ದು ದಿನಾಂಕ 8ರ ಸೋಮವಾರ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವುಂಟಾಗಲಿದೆ.


ಕನ್ನಡ ರಾಜ್ಯೋತ್ಸವ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು



ಶ್ರೀ ವೀರಭದ್ರೇಶ್ವರ ಕಾಂಡಿಮೆಂಟ್ಸ್
ಖುಷಿ ಟೀ ಸ್ಟಾಲ್
ಎಂ.ಎಸ್.ಶಿವಾನಂದ ಸ್ವಾಮಿ ಕನ್ನಡ ಕ್ರಾಂತಿ ಸೇನೆ, ಮಾಜಿ ಅಧ್ಯಕ್ಷರು, ದಾವಣಗೆರೆ
ಮಳಿಗೆ ನಂ, 1+2 ಹಳೇ ಬಸ್ಸ್ ನಿಲ್ದಾಣ ಹೈಸ್ಕೂಲ್ ಮೈದಾನ,ದಾವಣಗೆರೆ.





ಹುಟ್ಟುಹಬ್ಬದ ಶುಭಾಶಯಗಳು

ದಿನಾಂಕ 7.11.2021ರಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ದಾವಣಗೆರೆ ಮಹಾನಗರ ಪಾಲಿಕೆಯ ನೀರು ಸರಬರಾಜು ವಿಭಾಗದ ನೌಕರರಾದ
ಶ್ರೀ ಕೋಡಬಾಳ್ ಚನ್ನಬಸಪ್ಪ ಅವರಿಗೆ 59ನೇ ವರ್ಷದ ಜನ್ಮದಿನದ ಶುಭಾಶಯಗಳು.



ಶ್ರೀ ಕೋಡಬಾಳ್ ಚನ್ನಬಸಪ್ಪ ಹಳೇಪೇಟೆ

✦ ಮಹೇಂದ್ರಕುಮಾರ್ ವಿ. ಜೈನ್ ✦ ಸಿಂಗ್ರಿಹಳ್ಳಿ ವಿ. ನೀಲಕಂಠಪ್ಪ ✦ ಕಾರಡಿಗಿ ಕೊಟ್ರೇಶ್ (KRK) ✦ ಸಿಂಗ್ರಿಹಳ್ಳಿ ಇ. ಹೇಮರಾಜ್ ✦ ಎಂ.ಎನ್. ಅಣ್ಣಪ್ಪ ✦ ಪಿ.ವೈ. ಸಂತೋಷ್ ✦ ಎಸ್. ಮಂಜು, ವರ್ತಕರು ✦ ಬಳ್ಳಾರಿ ಷಣ್ಮುಖಪ್ಪ ✦ ಪ್ರಸನ್ನಕುಮಾರ್ ✦ ಎ. ನಾಗರಾಜ್ ✦ ದೇವರಮನಿ ಶಿವಕುಮಾರ್ ✦ ಶಿವನಳ್ಳಿ ರಮೇಶ್ ✦ ಬೆಳ್ಳೂಡಿ ಮಂಜುನಾಥ್ ✦ ಎಂ. ಮಂಜುನಾಥ್ ✦ ಜಯಣ್ಣ (ಜನತಾದಳ) ✦ ಆಲೂರು ಜಯಣ್ಣ ✦ ಏಕಾಂತಪ್ಪ ಮಲ್ಲಾಡವಾಣ ✦ ಜಿ.ಆರ್. ಮುರುಗೇಶ್, ಪತ್ರಿಕಾ ವಿತರಕರು



ಕೆಲಸಕ್ಕೆ ಬೇಕಾಗಿದ್ದಾರೆ

ಶಕೀರಾ ಬ್ಯೂಟಿ ಪಾರ್ಲರ್‌ಗೆ ಸಹಾಯಕಿಯರು ಬೇಕಾಗಿದ್ದಾರೆ.

# 741/4, 10th Main, P.J. Extension, Davanagere
93420 19013



WANTED TEACHERS

We r looking for qualified pre- school and primary class teachers ( LKG, UKG 1st to 5th std). English fluency is must
Contact with your bio data

96060-75754



ಹೃತ್ಪೂರ್ವಕ ಅಭಿನಂದನೆಗಳು





ದಾವಣಗೆರೆ ಮಹಾನಗರ ಪಾಲಿಕೆಗೆ ನೂತವಾಗಿ ನಾಮನಿರ್ದೇಶನ ಸದಸ್ಯರಾಗಿ ನೇಮಕಗೊಂಡಿರುವ ವಾರ್ಡ್ ನಂ. 21 ಬಸಾಪುರದ
ಬಿ.ಎಸ್. ಮರುಳಸಿದ್ದಪ್ಪ
ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು

ಶುಭ ಕೋರುವವರು
ಶ್ರೀ ಬಸವೇಶ್ವರ ದೇವಸ್ಥಾನ ಸಮಿತಿ
ಶ್ರೀ ಆಂಜನೇಯ ದೇವಸ್ಥಾನ ಸಮಿತಿ
ಶ್ರೀ ಗಣೇಶ ದೇವಸ್ಥಾನ ಸಮಿತಿ,
ಬಸಾಪುರ, ದಾವಣಗೆರೆ.



ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೇದಾರನಾಥದಲ್ಲಿ ಆದಿ ಶಂಕರಾಚಾರ್ಯರ ಪ್ರತಿಮೆ ಅನಾವರಣಗೊಳಿಸಿದರು.

## ಕರಾಮುವಿ ಸರ್ಟಿಫಿಕೇಟ್ ಕೋರ್ಸ್ ಪ್ರವೇಶಾತಿಗೆ ಆಹ್ವಾನ

ದಾವಣಗೆರೆ, ನ.6- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2021-22ರ ಜುಲೈ (ನವೆಂಬರ್) ಸಾಲಿನ ಪ್ರಥಮ ವರ್ಷದ ಬಿಎ, ಬಿಕಾಂ, ಬಿಎಲ್ಐ.ಎಸ್‌ಸಿ, ಬಿಬಿಎ, ಬಿಎಸ್‌ಸಿ, ಬಿಸಿಎ, ಎಂ.ಎ, ಎಂಕಾಂ, ಎಂಬಿಎ, ಎಂಎಲ್.ಐ.ಎಸ್‌ಸಿ, ಡಿಪ್ಲೋಮಾ, ಡಿಪ್ಲೋಮಾ ಸರ್ಟಿಫಿಕೇಟ್ ಕೋರ್ಸ್‌ನ ಅಧ್ಯಯನ ವಿಷಯಗಳ ಪ್ರವೇಶಾತಿಗೆ ಇದೇ ದಿನಾಂಕ 18 ಕೊನೆಯ ದಿನ. ವಿವರಕ್ಕೆ ವಿಶ್ವವಿದ್ಯಾನಿಲಯ ವೆಬ್‌ಸೈಟ್ www.ksoumysuru.ac.in ಅಥವಾ ದೂರವಾಣಿ ಸಂಖ್ಯೆ 9916009318, 8095939359, 9008905457 ಕ್ಕೆ ಸಂಪರ್ಕಿಸಬಹುದು. ಅಥವಾ ಪ್ರಾದೇಶಿಕ ಕೇಂದ್ರ ಕಚೇರಿಗೆ ಖುದ್ದಾಗಿ ಭೇಟಿ ನೀಡಬಹುದು ಎಂದು ವಿವಿ ಪ್ರಾದೇಶಿಕ ನಿರ್ದೇಶಕ ಡಾ.ವಿಜಯ್‌ಪ್ರಕಾಶ್ ತಿಳಿಸಿದ್ದಾರೆ.


ಹರಿಹರ ಮರ್ಚೆಂಟ್ಸ್ ಸೌಹಾರ್ದ ಕೋ-ಆಪ್, ನಿ.
1ನೇ ಮಹಡಿ, ಹಳೇ ಮಹಾರಾಷ್ಟ್ರ ಬ್ಯಾಂಕ್ ಬಿಲ್ಡಿಂಗ್, ಪಿ.ಬಿ. ರಸ್ತೆ, ಹರಿಹರ.

2020-21ನೇ ಸಾಲಿನ ಏಳನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ

ಹರಿಹರ ಮರ್ಚೆಂಟ್ಸ್ ಸೌಹಾರ್ದ ಕೋ-ಆಪ್ ನಿ., ಹರಿಹರ ಇವರ 7ನೇ ವಾರ್ಷಿಕ ಮಹಾಸಭೆಯನ್ನು ಸಹಕಾರಿ ಅಧ್ಯಕ್ಷರಾದ ಶ್ರೀ ಹೆಚ್.ಎಂ. ನಾಗರಾಜ ಇವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ: 07.11.2021ನೇ ಭಾನುವಾರ ಮಧ್ಯಾಹ್ನ 12.00 ಘಂಟೆಗೆ ಹರಿಹರ ನಗರದ ಗಾಂಧಿ ಮೈದಾನದ ಹತ್ತಿರದಲ್ಲಿರುವ ರಚನಾ ಕ್ರೀಡಾ ಟ್ರಸ್ಟ್ ಆವರಣದಲ್ಲಿ ಸಭೆ ಕರೆಯಲಾಗಿದೆ.
ಮಾನ್ಯ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ, ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೋರಲಾಗಿದೆ.

ಕೆ.ಜಿ. ಶಿವನಗೌಡ, ಕಾರ್ಯದರ್ಶಿ

ಪದಾಧಿಕಾರಿಗಳು :

ನಾಗರಾಜ ಹೆಚ್.ಎಂ. ಅಧ್ಯಕ್ಷರು
ವೀರಣ್ಣ ಜಿ.ಕೆ. ನಿರ್ದೇಶಕರು
ಮಂಜುನಾಥ್ ಹೆಚ್.ಎಸ್. ನಿರ್ದೇಶಕರು
ನಂಜಪ್ಪ ಜಿ. ನಿರ್ದೇಶಕರು
ಡಾ. ಪ್ರವೀಣ ಹೆಗಡೆ. ಉಪಾಧ್ಯಕ್ಷರು
ಸುಜಯ್ ಹೆಚ್.ವಿ. ನಿರ್ದೇಶಕರು
ಮಯೂರ್ ಹೆಚ್.ಎನ್. ನಿರ್ದೇಶಕರು
ರಾಘವೇಂದ್ರ ಬೊಂಗಾಳೆ ನಿರ್ದೇಶಕರು
ಡಾ. ಸೀಮಾ ಎನ್. ನಿರ್ದೇಶಕರು
ಶ್ರೀಮತಿ ಸುನಿತಾ ಪಿ. ಬದ್ದಿ ನಿರ್ದೇಶಕರು
ಶ್ರೀಮತಿ ನಾಗರತ್ನ ಜಿ.ಕೆ. ನಿರ್ದೇಶಕರು
ಶ್ರೀಮತಿ ಮಂಜುಳಾ ಪ್ರಸಾದ್ ನಿರ್ದೇಶಕರು

ವಿಶೇಷ ಸೂಚನೆ: ಆಮಂತ್ರಣ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಸಭೆಗೆ ಹಾಜರಾಗಬೇಕಾಗಿ ಕೋರಿದೆ. ಸಭೆಗೆ ಹಾಜರಾಗುವವರು ಕಡ್ಡಾಯವಾಗಿ ಮಾಸ್ಕ್, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು.




ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು ಚನ್ನಗಿರಿ ತಾಲ್ಲೂಕಿನ ದೊಡ್ಡಬ್ಬೀಗೆರೆಯಲ್ಲಿ ಶನಿವಾರ ವಿಜೃಂಭಣೆಯಿಂದ ಜರುಗಿತು.

## ದೇವರಬೆಳಕೆರೆ ಪಿಕಪ್ ಡ್ಯಾಂನಲ್ಲಿ ಮೊಸಳೆ : ಆತಂಕ



ಮಲೇಬೆನ್ನೂರು, ನ.6- ದೇವರಬೆಳಕೆರೆ ಪಿಕಪ್ ಡ್ಯಾಮ್‌ನಲ್ಲಿ ಮೊಸಳೆ ಕಾಣಿಸಿಕೊಂಡಿದ್ದು, ಜಲಾಶಯದ ಸುತ್ತಮುತ್ತಲಿನ ಜನರು ಆತಂಕದಲ್ಲಿದ್ದಾರೆ. ಸಂಕ್ಲೀಪುರ ಗ್ರಾಮದ ಸಮೀಪ ಇರುವ ಜಲಾಶಯದ ಹಿನ್ನೀರಿನಲ್ಲಿ ಮೊಸಳೆ ಈಜಾಡುತ್ತಿರುವ ಚಿತ್ರವನ್ನು ಗ್ರಾಮಸ್ಥರು ವೀಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

ಈಚೆಗೆ ಸುರಿದ ಭಾರೀ ಮಳೆಯಿಂದಾಗಿ ಸೂಳೆಕೆರೆಯಿಂದ ಹೊರಬರುವ ನೀರಿನಲ್ಲಿ ಈ ಮೊಸಳೆ ಹರಿದು ಬಂದಿರಬಹುದೆಂದು ರೈತರು ತಿಳಿಸಿದ್ದಾರೆ.

ತಾಲ್ಲೂಕು ಆಡಳಿತ ಹಾಗೂ ಅರಣ್ಯ ಇಲಾಖೆ, ಮೊಸಳೆ ಸೆರೆ ಹಿಡಿದು ಬೇರೆಡೆ ಸಾಗಿಸಬೇಕೆಂದು ಸಂಕ್ಲೀಪುರ, ಗುಳದಹಳ್ಳಿ, ಬೂದಿಹಾಳ್, ದೇವರಬೆಳಕೆರೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಕಳೆದ 3 ವರ್ಷಗಳ ಹಿಂದೆಯೂ ಇದೇ ಜಲಾಶಯದಲ್ಲಿ ಮೊಸಳೆ ಕಾಣಿಸಿಕೊಂಡಿತ್ತು. ನಂತರ ಅದನ್ನು ಜಲಾಶಯದ ಕೆಳಭಾಗದಲ್ಲಿ ಸೆರೆ ಹಿಡಿಯಲಾಗಿತ್ತು ಎನ್ನಲಾಗಿದೆ.

## ಎಸ್ಸೆಸ್‌ರಿಂದ ಗೋ ಪೂಜೆ



ದಾವಣಗೆರೆ, ನ.6- ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಶುಕ್ರವಾರ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಆಯೋಜಿಸಿದ್ದ ಗೋ ಪೂಜೆ ಸಮಾರಂಭದಲ್ಲಿ ಭಾಗವಹಿಸಿ, ಗೋವುಗಳಿಗೆ ಪೂಜೆ ಸಲ್ಲಿಸಿದರು.

ಪೂಜೆ ಸಲ್ಲಿಸಿದ ನಂತರ ಭಾರತ ದೇಶ ಕೃಷಿಕರ ನಾಡು, ಈ ದೇಶದಲ್ಲಿ ಬಲಿಪಾಡ್ಯಮಿ ಸಹಿತ ಬಹುತೇಕ ಹಬ್ಬ - ಹರಿದಿನಗಳಂದು ಗೋವುಗಳಿಗೆ ಪೂಜೆ ಸಲ್ಲಿಸುತ್ತಾ ಬರಲಾಗಿದೆ. ನಾವೂ ಸಹ ಇಂದಿಗೂ ಗೋವುಗಳಿಗೆ ಪೂಜೆ ಸಲ್ಲಿಸುತ್ತಿದ್ದು, ಸರ್ಕಾರ ಇದೊಂದು ಸರ್ಕಾರಿ ಕಾರ್ಯಕ್ರಮವಾಗಿ ಏಕೆ ರೂಪಿಸಿದೆ ಎಂದು ತಿಳಿದಿಲ್ಲ. ನಮ್ಮ ಸಂಪ್ರದಾಯದಂತೆ ನಾವು ಪೂಜೆ ಸಲ್ಲಿಸುತ್ತೇವೆ ಎಂದು ತಮ್ಮ ಹಿಂದಿನ ದಿನಗಳನ್ನು ನೆನಪು ಮಾಡಿಕೊಂಡರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಕಂದಾಯ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.


ವಾಣಿಜ್ಯೋದ್ದೇಶಕ್ಕಾಗಿ ಬಾಡಿಗೆಗೆ ಜಾಗ ಬೇಕಾಗಿದೆ
ಪ್ರತಿ ಕಾಲಂನ ಕನಿಷ್ಠ ಅಂತರ 16 ಅಡಿ ಅಗಲ ಇರುವ ನೆಲ ಅಂತಸ್ತು 4000 - 5000 ಅಡಿ ನೆಲ ಮತ್ತು 1ನೇ ಮಹಡಿ, ಲಿಫ್ಟ್ ವ್ಯವಸ್ಥೆ, 150 KV ಟ್ರಾನ್ಸ್‌ಫಾರ್ಮರ್ ಹಾಗೂ ಕನಿಷ್ಠ 40 ಅಡಿ ಮುಂಭಾಗ ಆವರಣವಿರುವ ಜಾಗವು ಬೇಕಾಗಿದೆ.
ಸ್ಥಳ: ಎಂಸಿಸಿ 'ಎ' ಬ್ಲಾಕ್/ಎಂಸಿಸಿ 'ಬಿ' ಬ್ಲಾಕ್/ಪಿ.ಜೆ. ಬಡಾವಣೆ
ಆಸ್ತಿ ಮಾಲೀಕರು ನೇರವಾಗಿ ಸಂಪರ್ಕಿಸಿ :
ಮೊ : 78990 55440

ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ
ಮನೆ ಅಡಿಗೆ ಹಾಗೂ ಇತರೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. (Full Time)
ಸಸ್ಯಹಾರಿಯಾಗಿರಬೇಕು.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ.
ಶಾಂತಲಾ ದಿ ವೆಡ್ಡಿಂಗ್ ಮಾಲ್...
ಚಾಮರಾಜ ಪೇಟೆ, ದಾವಣಗೆರೆ.
9686195326
9686195327

ಸಿರಿಮನೆ ಹೋಂ ಸ್ಟೇ
ಹಚ್ಚ ಹಸುರಿನ ಸುಂದರವಾದ ವಾತಾವರಣದಲ್ಲಿ ಮದುವೆ ಮತ್ತು ಎಲ್ಲ ತರಹದ ಶುಭ ಸಮಾರಂಭಗಳಿಗೆ ಅತೀ ಕಡಿಮೆ ದರದಲ್ಲಿ ಸ್ಥಳ ಲಭ್ಯವಿದೆ.
Get Free 2 days, 1 Night Stay in DANDELI for Newly Married Couple

SIRIMANE HOMESTAY
Anagodu, Davanagere.
M: 9880975286.

ದಾವಣಗೆರೆ ನಗರದಲ್ಲಿ ಇಂದಿನಿಂದ ಶುಭಾರಂಭ
ಜಿಲ್ಲಾ ಗುರುಭವನ ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆಯಲ್ಲಿ
NATIONAL & INTERNATIONAL BRANDED READYMADE GARMENTS
ಭಾರಿ ರಿಯಾಯಿತಿ ಮಾರಾಟ
ಮಹಿಳೆಯರ, ಪುರುಷರ, ಮಕ್ಕಳ ರೆಡಿಮೇಡ್ ಗಾರ್ಮೆಂಟ್ಸ್ ಹಾಗೂ ಬೆಡ್‌ಶೀಟ್‌ಗಳ ಮೇಲೆ ಭಾರಿ ರಿಯಾಯಿತಿ.
Raymond ARROW USA·1851 IZOD Pepe Jeans LONDON Crocodile PARK AVENUE Lee parx NETPLAY ColorPlus
ರಾಜಸ್ತಾನ ರಾಯಲ್ ಪ್ರಿಂಟ್ ಬೆಡ್‌ಶೀಟ್ ಮೇಳ
ಬೆಡ್ ಶೀಟ್ : ಕಥಾ ವರ್ಕ್ಸ್, ವರ್ಲಿ ಪ್ರಿಂಟ್, ಮಿಕ್ಕಿ ಮೌಸ್ ಪ್ರಿಂಟ್, ಕಾಟನ್ ಸ್ಯಾಟಿನ್ ಬೆಡ್‌ಶೀಟ್, ಕಲಂಕಾರಿ ಪ್ರಿಂಟ್,
ಎಂಬ್ರಾಯಿಡ್ ವರ್ಕ್ಸ್, ಕಲಂಕಾರಿ ಗೋಲ್ಡ್ ಪ್ರಿಂಟ್ AC ಬ್ಲಾಂಕೆಟ್, ಪ್ಯಾಚ್ ವರ್ಕ್ಸ್ ಇತ್ಯಾದಿ
ಕುಶನ್ ಕವರ್ : ಸೋಫಾ ಶೀಟ್, ದಿವಾನ್ ಕಾಟ್ ಶೀಟ್ ಪಿಲ್ಲೋ ಕವರ್, ಮ್ಯಾಟ್, ಟೇಬಲ್ ಕ್ಲಾತ್, ವೆಜಿಟೇಬಲ್ ಪ್ರಿಂಟ್, ಸ್ಯಾಟಿನ್ ಬೆಡ್ ಶೀಟ್ ಇತ್ಯಾದಿ
50,000 ವಿವಿಧ ಪ್ರಕಾರದ ಜಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ-ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಲೇಡಿಸ್ ಪೈಜಾಮ, ಕಿಡ್ಸ್ ಡ್ರೇಸ್, ಶರ್ಟ್, ಫ್ಯಾನ್ಸಿ, ಕುರ್ತೀಸ್, ನೈಟಿ ಎಕ್ಸ್‌ಪೋರ್ಟ್ ಸರ್ಪಸ್ ಐಟಂ ಹಾಗೂ ಇತರೆ
ಕೇವಲ ರೂ. 150/- ರಿಂದ 350/- ರವರೆಗೆ
ಬ್ರಾಂಡೆಡ್ ಲೇಡಿಸ್ ಕುರ್ತೀಸ್ ಮೇಳಾ : MRP. Upto ರೂ.3000/-
ಲೇಡಿಸ್ ಕುರ್ತೀಸ್ : ಮಲ್ಟಿಗ್ರೀನ್ ಕಾಟನ್ ಕುರ್ತೀಸ್, ವಿವಿಧ ಬಣ್ಣಗಳ ಕುರ್ತೀಸ್, ಎಕ್ಸ್‌ಲೆಂಟ್ ಪಾರ್ಟಿವೇರ್, ಕುರ್ತೀಸ್, ಎಂಬ್ರಾಯಡೆಡ್ ರಯಾನ ಕುರ್ತೀಸ್, ಪ್ರಿಂಟೆಡ್ ಕಾಟನ್ ಲಾಂಗ್-ಶಾರ್ಟ್ ಕುರ್ತೀಸ್ ಇತ್ಯಾದಿ.
ಕೇವಲ ರೂ. 350/- ಮತ್ತು 500/- ಮಾತ್ರ
ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್
MRP. ರೂ.1499/- ರಿಂದ 4999/-
ಪ್ಯಾಂಟ್, ಶರ್ಟ್, ಟಿ-ಶರ್ಟ್ ಮತ್ತು ಪುಲ್‌ಓವರ್
ಶರ್ಟ್, ಟಿ-ಶರ್ಟ್ : ಪಾರ್ಟಿವೇರ್, ಬಿಸ್‌ನೆಸ್‌ಕ್ಲಾಸ್, ಆಫೀಸ್‌ವೇರ್, ಫಾರ್ಮಲ್, ಕ್ಯಾಷ್ಯುಯಲ್ ಇತ್ಯಾದಿ.
ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್ : ಸಿಲ್ಕ್‌ಸ್ಟ್ರೆಚ್, ಮಸ್‌ರೈಸ್ ಸ್ಟ್ರೆಚ್, ಸ್ಟ್ರೆಚ್ ಜಿನ್ಯೂಸ್ ಕಾಟನ್, ಸಾರ್ಟಿನ್ ಸ್ಟ್ರೆಚ್ ಇತ್ಯಾದಿ.
ಕೇವಲ ರೂ. 499/- ರಿಂದ 999/- ಮಾತ್ರ
BIG OFFER 4 Shirts Just Rs. 999/-
MRP Upto Rs. 7999/- Big Brand BLAZER Plan, Checks, Fancy, Etc Just Rs. 999/- Onwards
ಬಿಗ್ ಬ್ರಾಂಡ್ ಕಿಡ್ಸ್ ಮೇಳ
MRP upto Rs.1999/-
ಹುಡಗಿಯರ : ಟಾಪ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಫ್ರಾಕ್, ಫ್ಯಾನ್ಸಿ ಡ್ರೆಸ್, ಪುಲೋವರ್, ಜಾಕೆಟ್ ಇತ್ಯಾದಿ
ಹುಡುಗರ : ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಶರ್ಟ್, ಟೀ-ಶರ್ಟ್, ಪುಲೋವರ್, ಫ್ಯಾನ್ಸಿ ಡ್ರೇಸ್, ಜಾಕೆಟ್ ಇತ್ಯಾದಿ
ಕೇವಲ ರೂ: 150/- ರಿಂದ 599/- ಮಾತ್ರ
Size 1 Month to 12 Years
ಆಫರ್ 4 ದಿನಗಳ ಮಾತ್ರ, 7, 8, 9 ಮತ್ತು 10 ನವೆಂಬರ್ 2021
ಸಮಯ:10 am to 9 pm NO LUNCH BREAK
ಜಿಲ್ಲಾ ಗುರುಭವನ ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ
ZILLA GURUBHAWAN A V K College Road DAVANGERE
FREE ENTRANCE PARKING
All Major Debit / Credit Cards. Google Pay, PhonePa Accepted
As per Govt. Rules Please Wear Mask & Maintain Scoial Distance


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte